ಬಂಟರ ಸಂಘ ಬೆಂಗಳೂರು
BUNTS' SANGHA BANGALORE
www.buntsanghablr.com

# ಸ್ನೇಹ ಚಿಂತನ
ಮಾಸ ಪತ್ರಿಕೆ

ಫೆಬ್ರವರಿ 2020
ಸಂಪುಟ 16, ಸಂಚಿಕೆ 02
ಸಂಚಿಕೆ ಬೆಲೆ ರೂ. 1/-

324, Chord Road
Vijayanagara
Bengaluru - 560 040.
Ph: 080 2339 9323, 2339 9635
E: info@buntsanghablr.com



ಗುರುಪುರ 'ಬಂಟ ಕಲಾವೀಳ್ಯ 2020' ಪ್ರಥಮ ಬಹುಮಾನ ಮುಡಿಗೇರಿಸಿಕೊಂಡ ಬೆಂಗಳೂರು ಬಂಟರ ಸಂಘ





ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ಕ್ರೀಡಾ ಮತ್ತು ಸಾಂಸ್ಕೃತಿಕ ದಿನಾಚರಣೆ



ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರ–
20ನೇ ವಾರ್ಷಿಕೋತ್ಸವ ಸಮಾರಂಭ


ATTIDE
A Boutique Hotel by Swathi Group
3RD ANNIVERSARY
We couldn't have done it without you!
THANK YOU
TO ALL OUR LOYAL GUESTS
Opp Jakkur Flying Club, International Airport Road, Bengaluru - 560 064
080 2217 7177 990 2000 200 www.attidehotels.com

ADVT

# ಸ್ನೇಹ ಚಿಂತನೆ

*Monthly Magazine Published by*

**BUNTS' SANGHA BANGALORE**

**VOL. 16** **FEBRUARY 2020** **ISSUE 02**

**ಸಾಹಿತ್ಯ–ಪ್ರಕಾಶನ ಸಮಿತಿ**

ಚೇರ್‌ಪರ್ಸನ್ ಮತ್ತು ಗೌ॥ ಸಂಪಾದಕರು :
**ಶ್ರೀ ಎಂ. ಮುರಲೀಧರ ಹೆಗ್ಡೆ**

ಸಲಹಾ ಮಂಡಳಿ :
**ಶ್ರೀ ಎ. ಗಿರೀಶ್ ರೈ**
**ಶ್ರೀ ಸತ್ಯಾನಂದ ಮೇಲಾಂಟ ಎನ್.**
**ಶ್ರೀ ಪ್ರಕಾಶ್ ಶೆಟ್ಟಿ**

ಸಂಪಾದಕ ಮಂಡಳಿ :
**ಶ್ರೀಮತಿ ಸ್ಮಿತಾ ಬಲ್ಲಾಳ್**
**ಶ್ರೀಮತಿ ನಿರ್ಮಲಾ ಸಿ. ರೈ**
**ಕುಮಾರಿ ಶಾಲ್ಮಲೀ ಸುರೇಶ್**
**ಶ್ರೀಮತಿ ಶ್ಯಾಮಲಾ ಶೆಟ್ಟಿ**
**ಶ್ರೀಮತಿ ಅನುಷಾ ಶೆಟ್ಟಿ**

ಪೋಷಕ ಸದಸ್ಯರು :
**ಶ್ರೀಮತಿ ಮನೋರಮ ಚೌಟ**
**ಶ್ರೀಮತಿ ವೇದ ಎಸ್. ಶೆಟ್ಟಿ**
**ಶ್ರೀ ಬಿ. ಕುಸುಮಾಕರ ಶೆಟ್ಟಿ**
**ಶ್ರೀ ಆರ್.ಎಸ್. ಶೆಟ್ಟಿ**
**ಶ್ರೀಮತಿ ವಸಂತಿ ಪಿ. ಶೆಟ್ಟಿ**
**ಶ್ರೀ ಪ್ರಕಾಶ್ ಶೆಟ್ಟಿ**
**ಶ್ರೀ ಎ.ಜೆ. ಶೆಟ್ಟಿ**
**ಶ್ರೀಮತಿ ಗೀತ ಭಗವಾನ್‌ದಾಸ್ ರೈ**
**ಶ್ರೀ ಕೆ. ಶಂಕರ್ ಶೆಟ್ಟಿ ಹುಬ್ಬಳ್ಳಿ**
**ಶ್ರೀ ಶ್ರೀನಿವಾಸ ಸೂಡ**

ಪ್ರಕಾಶಕರು :
**ಮಧುಕರ ಎಂ. ಶೆಟ್ಟಿ**

## ಒಳ ಪುಟಗಳಲ್ಲಿ...

| | | ಪುಟ |
|---|---|---|
| 1. | ಸಂಪಾದಕೀಯ | 2 |
| 2. | ಅಧ್ಯಕ್ಷರ ಮಾತು | 3 |
| 3. | ಗೌರವ ಕಾರ್ಯದರ್ಶಿಗಳ ವರದಿ | 4 |
| 4. | ನಮ್ಮ ಸಂಸ್ಕೃತಿಯ ಪ್ರತಿಬಿಂಬಗಳು | 5 |
| 5. | Father's Role as Chowkidar | 8 |
| 6. | ಮರೆಯಲಾಗದ ಬಾಲ್ಯ | 9 |
| 7. | ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರದ 20ನೇ ವಾರ್ಷಿಕೋತ್ಸವ ಸಮಾರಂಭ | 11 |
| 8. | ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ಕ್ರೀಡಾ ಮತ್ತು ಸಾಂಸ್ಕೃತಿಕ ದಿನಾಚರಣೆಯ ವರದಿ | 13 |
| 9 | ರಂಗತರಬೇತಿ ಮತ್ತು ಯಕ್ಷಗಾನ ಸಮಿತಿ | 15 |
| 10. | ಹುಬ್ಬಳ್ಳಿ–ಧಾರವಾಡ ಬಂಟರ ಸಂಘದ ವಾರ್ಷಿಕ ಸ್ನೇಹಕೂಟ | 19 |
| 11. | ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ "ಪ್ರೇರಣಾ ಅಂತರ್ ಶಾಲಾ ಸ್ಪರ್ಧೆ 2019–20" | 20 |
| 12. | Bunts' Sangha R.N.S Vidyaniketan CBSE - Spectrum Report | 26 |
| 13. | ಸಮಾಜ ಸೇವಾ ಸಮಿತಿ ಮತ್ತು ಸೇವಾದಳ ವತಿಯಿಂದ ಸೇವಾ ಚೇತನ | 27 |
| 14. | ಮಹಿಳಾ ವಿಭಾಗ–ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ | 28 |
| 15. | ವಿದ್ಯಾರ್ಥಿವೇತನ ಮತ್ತು ಪ್ರಶಸ್ತಿ ಸಮಿತಿ ಪ್ರತಿಭಾ ಪುರಸ್ಕಾರ ಹಾಗೂ ದತ್ತಿ ಪ್ರಶಸ್ತಿ ವಿತರಣೆ | 29 |
| 16. | Matrimonial | 32 |

### ಮುಖಪುಟ

**ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರ -**
**20ನೇ ವಾರ್ಷಿಕೋತ್ಸವ ಸಮಾರಂಭ**

**ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ಕ್ರೀಡಾ ಮತ್ತು ಸಾಂಸ್ಕೃತಿಕ ದಿನಾಚರಣೆ**

**ಗುರುಪುರ 'ಬಂಟ ಕಲಾವೀಳ್ಯ 2020' ಪ್ರಥಮ ಬಹುಮಾನ**
**ಮುಡಿಗೇರಿಸಿಕೊಂಡ ಬೆಂಗಳೂರು ಬಂಟರ ಸಂಘ**

ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳಲ್ಲಿನ ಅಭಿಪ್ರಾಯಗಳು ಆಯಾ ಲೇಖಕರಿಗೆ ಸೇರಿದ್ದು, ಇದರಲ್ಲಿ ಬಂಟರ ಸಂಘಕ್ಕೆ ಯಾವುದೇ ತೆರನಾದ ಜವಾಬ್ದಾರಿ ಇರುವುದಿಲ್ಲ.

**–ಸಂಪಾದಕೀಯ**

# ಸಂಪಾದಕೀಯ



## ಸಂಸ್ಕಾರಯುಕ್ತ ಶಿಕ್ಷಣ

"ಎಜುಕೇಟೆಡ್" ಎಂಬ ಪದ ಯಾವಾಗಲೂ ನನ್ನ ಮನಸ್ಸಿನಲ್ಲಿ ಒಂದು ತರಹದ ಗೊಂದಲವನ್ನು ಸೃಷ್ಟಿ ಮಾಡುತ್ತಲೇ ಇದೆ. ಸಾಮಾನ್ಯವಾಗಿ ಯಾರಾದರೂ ಸಣ್ಣ ತಪ್ಪು ಮಾಡಿದಾಗ "ಎಜುಕೇಟೆಡ್" ಆಗಿ ಹೀಗೆ ಮಾಡಿದಿಯಾ? ಎಂದು ಅವರನ್ನು ಕೇಳುವುದಿದೆ. ಹಾಗಿದ್ದರೆ ಏನಿದು "ಎಜುಕೇಟೆಡ್"?? ಕಳೆದ ಜನವರಿ 26ರಂದು ಬೆಂಗಳೂರು ಬಂಟರ ಸಂಘದಲ್ಲಿ ನಡೆದ ಸಮಾರಂಭದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ ಪ್ರೊ. ಡಾ ರಮಾನಂದ ಶೆಟ್ಟಿಯವರು, ರಾಜೀವ್ ಗಾಂಧಿ ಆರೋಗ್ಯ ವಿ.ವಿಯ ವಿಶ್ರಾಂತ ಕುಲಪತಿಗಳು, ತಮ್ಮ ಭಾಷಣದಲ್ಲಿ ಈ ಮೇಲಿನ ವಿಷಯವನ್ನು ಪ್ರಸ್ತಾಪಿಸಿದರು. ಅವರು ಮಾತನಾಡುತ್ತಾ.... ಕೇವಲ ಡಿಗ್ರಿ, PG ಡಿಗ್ರಿ ಪಡೆದುಕೊಂಡವರೆಲ್ಲಾ ವಿದ್ಯಾವಂತರಲ್ಲ ನಮ್ಮ ಹಿರಿಯರಲ್ಲಿ ಅನೇಕರು 2,3 ಅಥವಾ 10ನೇ ತರಗತಿಯವರೆಗೆ ಓದಿರಬಹುದು ಆದರೆ ಅವರ ಯೋಚನೆಗಳು, ಆಚಾರ ವಿಚಾರಗಳು, ಚಿಂತನೆಗಳು ಹೇಗಿದ್ದವು ಎಂಬುದನ್ನು ನಾವು ಗಮನಿಸಬೇಕು. ಅವರಿಗೆ ಅನೇಕ ವಿಚಾರಗಳ ಬಗ್ಗೆಯೂ ಜ್ಞಾನವಿತ್ತು, ಜೀವನದ ಮೌಲ್ಯ ತಿಳಿದಿತ್ತು, ಅಂತೆಯೇ ಅವರ ಮುಂದಿನ ಪೀಳಿಗೆಯನ್ನು ಬೆಳೆಸುವಲ್ಲಿ ಮುತುವರ್ಜಿ ವಹಿಸುತ್ತಿದ್ದರು.

ಆದರೆ ಇಂದಿನ ವಿದ್ಯಾವಂತರದ್ದು ಬೇರೆಯೇ ಸಮಸ್ಯೆ. ಇವರಲ್ಲಿ ಹೆಚ್ಚಿನವರಲ್ಲಿ ನಾವು ಗಮನಿಸಬಹುದಾದ ವಿಷಯವೆಂದರೆ ಅವರು ಏನು ಓದಿರುತ್ತಾರೋ, ಯಾವ ವಿಷಯದಲ್ಲಿ ಪದವಿ ಪಡೆದಿರುತ್ತಾರೋ, ಆ ವಿಷಯ ಬಿಟ್ಟರೆ ಇತರ ವಿಷಯಗಳ ಬಗ್ಗೆ ಹೆಚ್ಚಿಗೆ ತಿಳಿದುಕೊಳ್ಳುವ ಗೋಜಿಗೆ ಅವರು ಹೋಗುವುದಿಲ್ಲ. ಇಂದಿನ "ಮುಂದುವರಿದ" ಜೀವನ ಶೈಲಿಯೂ ಇದಕ್ಕೆ ಕಾರಣವಿರಬಹುದು. ಯಾರು ಯಾರನ್ನೂ ಅವಲಂಬಿತರಾಗಿರುವುದಿಲ್ಲ. ಹಾಗಾಗಿ ಇನ್ನೊಬ್ಬರ ಬಗ್ಗೆ ಪರಿವೆಯೇ ಇರುವುದಿಲ್ಲ.

ಒಮ್ಮೊಮ್ಮೆ ನಿಜವಾಗಿಯೂ ಆಶ್ಚರ್ಯವಾಗುತ್ತದೆ... ಕೆಲವರ ಚಿಂತನೆಗಳು ಎಷ್ಟೊಂದು ಸಣ್ಣ ಮಟ್ಟಿಗೆ ಇರುತ್ತದೆ ಎಂದರೆ "ಎಜುಕೇಟೆಡ್" ಆಗಿದ್ದವರೂ ಸಣ್ಣ ಸಣ್ಣ ವಿಷಯಗಳಿಗೆ ಜಗಳ, ಆಸ್ತಿ ವಿಚಾರ ಆಗಿರಬಹುದು ಇತ್ಯಾದಿ. ಒಂದು ಅಡಿ ಜಾಗಕ್ಕೂ ಅಣ್ಣ ತಮ್ಮಂದಿರೊಳಗೆ ಜಗಳವಾಗಿ ಕೊಲೆ, ಜೈಲಿನಲ್ಲಿ ಅಂತ್ಯವಾಗುವಂತಹ ಸುದ್ದಿಗಳನ್ನು ನಾವು ದಿನ ನಿತ್ಯ ಟಿ.ವಿ ಯಲ್ಲಿ ಅಥವಾ ಪತ್ರಿಕೆಗಳಲ್ಲಿ ನೋಡುತ್ತಿರುತ್ತೇವೆ. ಇದು ಸಾಮಾನ್ಯ ಜ್ಞಾನದ ಕೊರತೆ ಎಂಬುದು ಸ್ಪಷ್ಟವಾಗಿ ನಮಗೆ ತಿಳಿಯುತ್ತದೆ.

ಗುರು ಹಿರಿಯರ ಬಗ್ಗೆ ಗೌರವ, ಇತರರನ್ನು ಗೌರವಿಸುವ ಸ್ವಭಾವ, ಸಣ್ಣ ಪುಟ್ಟ ವಿಷಯಗಳಿಗೆ ತಲೆ ಕೆಡಿಸಿಕೊಳ್ಳದಿರುವುದು, ಇತರರಿಗೆ ಅಗತ್ಯವಿದ್ದಲ್ಲಿ ಸಹಾಯ ಮಾಡುವ ಮನೋಭಾವ, ಸ್ವಪ್ರತಿಷ್ಠೆ ಬಗ್ಗೆ ಚಿಂತಿಸಬೇಕಾಗಿರುವುದು, ನಮ್ಮ ಪರಿಸರದ ಬಗ್ಗೆ, ಮುಂದಿನ ಪೀಳಿಗೆಯ ಬಗ್ಗೆ ಚಿಂತನೆ, ದುಂದು ವೆಚ್ಚ ಮಾಡದಿರುವುದು ಇವೆಲ್ಲಾ ನಾವು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕಾದ ಮುಖ್ಯ ಗುಣಗಳು. ಯಾರು ಇಂತಹ ಗುಣಗಳನ್ನು ಹೊಂದಿರುತ್ತಾರೋ ಅವರೇ "ಎಜುಕೇಟೆಡ್" ಎಂಬುದು ನನ್ನ ಅಭಿಪ್ರಾಯ. ಇದರಿಂದ ಉತ್ತಮ ಸಮಾಜ ಕಟ್ಟುವಲ್ಲಿ ನಮ್ಮ ಪಾತ್ರವೂ ಇದ್ದಂತಾಗುತ್ತದೆ.

ಇತ್ತೀಚೆಗೆ ಡಾ। ಗುರುರಾಜ ಕರ್ಜಗಿಯವರು ಕಟೀಲಿನಲ್ಲಿ ನಡೆದ ಬ್ರಹ್ಮ ಕಲಶೋತ್ಸವ ಕಾರ್ಯಕ್ರಮದಲ್ಲಿ ಹೇಳಿದ "ಅನುಕರಣೆ ಮಾಡದೇ ಅನುಸರಣೆ"ಯಿಂದ ಮಾತ್ರ ಅಭಿವೃದ್ಧಿ ಸಾಧ್ಯ; ಯಾವ ಶಕ್ತಿಯಿಂದ ಯಾವ ಪರಿಷ್ಕಾರದಿಂದ ಪ್ರಕೃತಿ ಸಂಸ್ಕೃತಿಯಾಗುತ್ತದೋ ಅದು ಸಂಸ್ಕಾರವಾಗುತ್ತದೆ; ಅಂಥಹ ಸಂಸ್ಕಾರಯುತ ಶಿಕ್ಷಣವಿದ್ದರೆ ಮಾತ್ರ ಅಭಿವೃದ್ಧಿ ಸಾಧ್ಯ ಎಂಬ ಮಾತು ಎಷ್ಟು ಅರ್ಥಗರ್ಭಿತವಾಗಿದೆ. ಹಾಗೆಯೇ ಸರಳತೆಯ ಪ್ರತೀಕವಾಗಿರುವ ಶ್ರೀಮತಿ ಸುಧಾಮೂರ್ತಿಯವರ ವಿನಯತೆ, ವಿದ್ಯೆ, ಸಂಸ್ಕಾರ ನಮ್ಮೆಲ್ಲರಿಗೂ ಮಾದರಿ.

**ಎಂ. ಮುರಲೀಧರ ಹೆಗ್ಡೆ**
hegdemm@gmail.com

# ಅಧ್ಯಕ್ಷರ ಮಾತು



ಆತ್ಮೀಯ ಸದಸ್ಯ ಬಾಂಧವರೇ,

ಜನವರಿ ತಿಂಗಳಿನಲ್ಲಿ ಸಂಘದಲ್ಲಿ ನಡೆದ ವಿವಿಧ ಕಾರ್ಯಕ್ರಮಗಳಲ್ಲಿ ತಾವೆಲ್ಲರೂ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ನಮ್ಮನ್ನು ಪ್ರೋತ್ಸಾಹಿಸಿರುತ್ತೀರಿ.

ಸಂಘದ ವರಸಿದ್ಧಿ ವಿನಾಯಕ ಮಂದಿರ ಪ್ರಾರಂಭಗೊಂಡು 20 ವರ್ಷಗಳು ಪೂರ್ಣಗೊಂಡಿದ್ದು, ದಿನಾಂಕ 19.01.2020 ರಂದು 20 ನೇ ವಾರ್ಷಿಕೋತ್ಸವ ಕಾರ್ಯಕ್ರಮವು ದಾನಿಗಳ ಹಾಗೂ ಭಕ್ತರ ನೆರವಿನಿಂದ ಬಹಳ ಅದ್ದೂರಿಯಾಗಿ ನಡೆಯಿತು. ಪ್ರಾರ್ಥನಾ ಮಂದಿರ ಸಮಿತಿಯ ಚೇರ್‌ಪರ್ಸನ್ ಶ್ರೀ ರಾಜೇಶ್ ಶೆಟ್ಟಿಯವರು ಸ್ವತಃ ಅನ್ನ ಸಂತರ್ಪಣೆಯ ಸೇವೆಯನ್ನು ವಹಿಸಿಕೊಂಡಿದ್ದು, ವಿಶೇಷವಾಗಿತ್ತು. ಸಮಿತಿಯ ಚೇರ್‌ಪರ್ಸನ್, ಸಂಚಾಲಕ ಶ್ರೀ ಉಮೇಶ್ ಕುಮಾರ್ ಶೆಟ್ಟಿ ಹಾಗೂ ಸಮಿತಿಯ ಎಲ್ಲಾ ಸದಸ್ಯರಿಗೆ ಹೃತ್ಪೂರ್ವಕ ಅಭಿನಂದನೆಗಳು. ಇದೇ ಸಂದರ್ಭದಲ್ಲಿ ರಂಗ ತರಬೇತಿ ಮತ್ತು ಯಕ್ಷಗಾನ ಸಮಿತಿ ಆಯೋಜಿಸಿದ್ದ ಯಕ್ಷ ತೋರಣ - 2 ಕಾರ್ಯಕ್ರಮ ಯಶಸ್ವಿಯಾಗಿ ಮೂಡಿಬರಲು ಶ್ರಮಿಸಿದ ಸಮಿತಿಯ ಚೇರ್‌ಪರ್ಸನ್ ಶ್ರೀ ಗುರುಪ್ರಸಾದ್ ಎನ್. ಹೆಗ್ಡೆ, ಸಂಚಾಲಕರಾದ ಶ್ರೀ ಸಂತೋಷ್ ಕುಮಾರ್ ಶೆಟ್ಟಿ ಹಾಗೂ ತಂಡದ ಸರ್ವಸದಸ್ಯರಿಗೆ ವಂದನೆಗಳು.

ಸಂಘದ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ವಾರ್ಷಿಕ ಕ್ರೀಡಾ ಮತ್ತು ಸಾಂಸ್ಕೃತಿಕ ದಿನಾಚರಣೆಯ ಶುಭ ಸಂದರ್ಭದಲ್ಲಿ ಸಂಘದ ಹಿರಿಯ ಸದಸ್ಯ, ಕಲಬುರ್ಗಿಯ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಪತಿಗಳಾದ ಡಾ.ಎನ್.ಆರ್. ಶೆಟ್ಟಿಯವರನ್ನು ದಿ.ಶ್ರೀ ಕೆ.ಪಿ. ರಾಮಣ್ಣ ಶೆಟ್ಟಿ ಸ್ಮಾರಕ ಪ್ರಶಸ್ತಿ ನೀಡಿ ಹಾಗೂ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಕೆ.ಎಸ್.ಡಿ.ಎಲ್.ನ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ವಿಜಯ್ ಕುಮಾರ್ ಶೆಟ್ಟಿ, ಐಎಫ್‌ಎಸ್. ಇವರಿಗೆ ದಿ. ಡಾ. ಮಧುಕರ ಶೆಟ್ಟಿ, ಐ.ಪಿ.ಎಸ್. ಸ್ಮಾರಕ ಪ್ರಶಸ್ತಿ ನೀಡಿ ಗೌರವಿಸುವ ಅವಕಾಶ ಒದಗಿ ಬಂದಿರುವುದು ವಿಶೇಷವಾಗಿತ್ತು. ಮುಖ್ಯ ಅತಿಥಿಗಳಾಗಿ ರಾಜೀವ ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯ ಮತ್ತು ನಿಟ್ಟೆ ವಿಶ್ವವಿದ್ಯಾನಿಲಯದ ವಿಶ್ರಾಂತ ಉಪಕುಲಪತಿ ಡಾ.ಎಸ್. ರಮಾನಂದ ಶೆಟ್ಟಿಯವರು ಹಾಗೂ ಅತಿಥಿಗಳಾಗಿ ಇಂಟರ್‌ನ್ಯಾಷನಲ್ ರ್‍ಯಾಲಿ ಚಾಂಪಿಯನ್ ಶ್ರೀ ಅಶ್ವಿನ್ ನಾಯ್ಕ್ ನಮ್ಮೊಂದಿಗೆ ವೇದಿಕೆ ಹಂಚಿಕೊಂಡಿದ್ದು ನಮಗೆ ಸಂತಸವನ್ನು ತಂದಿದೆ. ಈ ದಿನಾಚರಣೆಯ ಅಂಗವಾಗಿ ವಿವಿಧ ಕ್ರೀಡೆ ಹಾಗು ಸಾಂಸ್ಕೃತಿಕ ಸ್ಪರ್ಧೆಗಳನ್ನು ಯಶಸ್ವಿಯಾಗಿ ಆಯೋಜಿಸಿದ ಕ್ರೀಡಾ ಸಮಿತಿಯ ಚೇರ್ ಪರ್ಸನ್ ಶ್ರೀ ರಾಧಾಕೃಷ್ಣ ಶೆಟ್ಟಿ, ಸಂಚಾಲಕರಾದ ಶ್ರೀ ರಂಜಿತ್ ಶೆಟ್ಟಿ, ಸಾಂಸ್ಕೃತಿಕ ಸಮಿತಿಯ ಚೇರ್‌ಪರ್ಸನ್ ಶ್ರೀ ವಿಜಯ್ ಜೆ. ಶೆಟ್ಟಿ ಹಾಲಾಡಿ, ಸಂಚಾಲಕರಾದ ಶ್ರೀ ಪ್ರಸಾದ್ ಶೆಟ್ಟಿ ಮತ್ತು ಉಪಸಮಿತಿಯ ಎಲ್ಲಾ ಸದಸ್ಯರಿಗೆ ಅಭಿನಂದನೆಗಳು. ದಾನಿಗಳ ನೆರವಿನಿಂದ ಸ್ಥಾಪಿಸಲಾದ ವಿವಿಧ ದತ್ತಿ ಪ್ರಶಸ್ತಿಗೆ ಹಾಗೂ ಪ್ರತಿಭಾ ಪುರಸ್ಕಾರಕ್ಕೆ ಸೂಕ್ತ ಅಭ್ಯರ್ಥಿಗಳನ್ನು ಆಯ್ಕೆಮಾಡುವಲ್ಲಿ ಮುತುವರ್ಜಿ ವಹಿಸಿ ಅಚ್ಚುಕಟ್ಟಾಗಿ ಕಾರ್ಯಕ್ರಮ ನೆರವೇರಿಸುವಲ್ಲಿ ಶ್ರಮಿಸಿದ ವಿದ್ಯಾರ್ಥಿವೇತನ ಮತ್ತು ಪ್ರಶಸ್ತಿ ಸಮಿತಿಯ ಚೇರ್‌ಪರ್ಸನ್ ಶ್ರೀ ಪ್ರವೀಣಚಂದ್ರ ಶೆಟ್ಟಿ, ಸಂಚಾಲಕರಾದ ಶ್ರೀ ಉದಯ್ ಶೆಟ್ಟಿ ಮತ್ತು ತಂಡಕ್ಕೆ ವಂದನೆಗಳು.

ಗುರುಪುರ ಮಾತೃ ಸಂಘದ ವತಿಯಿಂದ ಆಯೋಜಿಸಲಾದ ಬಂಟ ಕಲಾವೀಳ್ಯ 2020 ಸ್ಪರ್ಧೆಯಲ್ಲಿ ಭಾಗವಹಿಸಿ ಪಡೆದ ಪ್ರಥಮ ಬಹುಮಾನ ಬಂಟರ ಸಂಘದ ಸಕ್ರಿಯ ಸಾಂಸ್ಕೃತಿಕ ಕಾರ್ಯಚಟುವಟಿಕೆಗಳ ಹಿರಿಮೆಗೆ ಮತ್ತೊಂದು ಗರಿಯಾಯಿತು. ಸಾಂಸ್ಕೃತಿಕ ಸಮಿತಿಯ ಚೇರ್‌ಪರ್ಸನ್ ಮತ್ತು ತಂಡದವರ ಅವಿರತ ಪ್ರಯತ್ನ ಹಾಗೂ ಕಲಾವಿದರ ಪರಿಶ್ರಮಕ್ಕೆ ಅಭಿನಂದನೆಗಳು

ಶಿಕ್ಷಣ, ಉದ್ಯೋಗ ಹಾಗೂ ಉದ್ದಿಮೆಗಾಗಿ ರಾಜ್ಯದ ರಾಜಧಾನಿಗೆ ಆಗಮಿಸುವ ಯುವ ಸಮುದಾಯಕ್ಕೆ ನೆರವಾಗುವ ಉದ್ದೇಶದಿಂದ ಆರಂಭಗೊಳ್ಳುತ್ತಿರುವ ಪುರುಷರ ಹಾಸ್ಟೆಲ್‌ನ ಕಾಮಗಾರಿ ಭರದಿಂದ ನಡೆಯುತ್ತಿದ್ದು, ಇನ್ನೆರಡು ತಿಂಗಳಿನಲ್ಲಿ ಶುಭಾರಂಭಗೊಳ್ಳಲಿದೆ. ಹಾಸ್ಟೆಲ್ ಸೇರಲಿಚ್ಛಿಸುವ ಅರ್ಹ ಯುವಕರು ಅರ್ಜಿ ಫಾರಂಗಳಿಗಾಗಿ ಸಂಘದ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ.

ಬಂಟ ಸಮುದಾಯ ಅತೀ ಚಿಕ್ಕ ಸಮುದಾಯವಾದರೂ ಎಲ್ಲಾ ರಂಗಗಳಲ್ಲಿಯೂ ತನ್ನದೇ ಆದ ಛಾಪನ್ನು ಮೂಡಿಸಿ ದೇಶ ವಿದೇಶಗಳಲ್ಲಿ ಕೀರ್ತಿಯನ್ನು ಪಸರಿಸಿದೆ. ಆದರೆ, ನಮ್ಮ ರಾಜ್ಯ ಹಾಗೂ ದೇಶದ ಸರಕಾರಿ ಸೇವೆಯ ಉನ್ನತ ಹುದ್ದೆಗಳಲ್ಲಿ ಬಂಟ ಸಮುದಾಯದ ಪ್ರಾತಿನಿಧ್ಯ ಬಹಳ ಕಡಿಮೆ ಇರುವುದು ಸತ್ಯ. ಸಮುದಾಯದ ಯುವಕ-ಯುವತಿಯರು ಕೇಂದ್ರ ಲೋಕ ಸೇವಾ ಆಯೋಗ (UPSC), ಕರ್ನಾಟಕ ಲೋಕ ಸೇವಾ ಆಯೋಗ (KPSC) ಹಾಗೂ ಇತರ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಸಮರ್ಥವಾಗಿ ಎದುರಿಸಲು ಬೇಕಾದ ಮಾರ್ಗದರ್ಶನ ಮತ್ತು ತರಬೇತಿ ನೀಡುವಲ್ಲಿ ಸರ್ವ ಬಂಟರ ಸಂಘಗಳ ಪ್ರತಿನಿಧಿಗಳು ಹಾಗೂ ಬಂಟ ಮುಖಂಡರು ಗಮನ ಹರಿಸಿ ಸೂಕ್ತ ಕ್ರಮ ಕೈಗೊಳ್ಳಬೇಕಾಗಿ ವಿನಂತಿ. ಇದರಿಂದ ಪ್ರತೀ ವರ್ಷ ಕನಿಷ್ಟ 5-6 ಯುವಕ-ಯುವತಿಯರು ಸರಕಾರದ ಉನ್ನತ ಹುದ್ದೆಗೆ ಆಯ್ಕೆಗೊಂಡರೆ ನಮ್ಮ ಪರಿಶ್ರಮಕ್ಕೆ ಫಲ ದೊರಕಿದಂತೆಯೇ ಸರಿ.

ವಂದನೆಗಳೊಂದಿಗೆ,

**ಆರ್. ಉಪೇಂದ್ರ ಶೆಟ್ಟಿ**
ಅಧ್ಯಕ್ಷರು

# ಗೌರವ ಕಾರ್ಯದರ್ಶಿಗಳ ವರದಿ



ಓಂ ಗುರುಭ್ಯೋ ನಮಃ

ಚಂದ್ರ ಅಮೃತಕ್ಕೆ ಮೂಲ ಕಾರಣ ಅಮೃತ ಮರಣವನ್ನು ತಡೆಯುತ್ತದೆ. ಸಂಜೀವಿನ್ಯಾದಿ ಸಮಸ್ತ ವನಸ್ಪತಿಗಳಿಗೆ ಚಂದ್ರನು ಒಡೆಯ. 'ಶತಭಿಷಕ' ಎಂಬ ನಕ್ಷತ್ರದಿಂದ ಹಿಂಬಾಲಿಸಲ್ಪಡುವವನೂ ಲೋಕೇಶ್ವರನಾದ ಈಶ್ವರನ ತಲೆಯ ಮೇಲೆ ಭೂಷಣಪ್ರಾಯನಾಗಿರುವವನೂ, ಆದರೂ ಇವನಿಗೆ ಕ್ಷಯರೋಗ ಪೀಡಿಸದಿರುವುದಿಲ್ಲ. ಈ ರೀತಿ ಇವನಿಗೆ ದುರ್ವಿಧಿಯ ಪರಿಣಾಮವನ್ನು ಯಾರು ತಾನೇ ತಪ್ಪಿಸಿಕೊಳ್ಳಬಲ್ಲರು.

ಶ್ರೀಮತಿ ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ಕ್ರೀಡಾ ಮತ್ತು ಸಾಂಸ್ಕೃತಿಕ ದಿನಾಚರಣೆ ಪ್ರತಿ ವರ್ಷದಂತೆ ಜನವರಿ 26ರಂದು ಸಂಘದ ಆವರಣದಲ್ಲಿ ನಡೆಯಿತು. ಕ್ರೀಡಾ ಸಮಿತಿಯ ಚೇರ್‌ಮೆನ್ ಶ್ರೀ ರಾಧಾಕೃಷ್ಣ ಶೆಟ್ಟಿ ಮತ್ತು ಅವರ ತಂಡ ಬಹಳ ವ್ಯವಸ್ಥಿತವಾಗಿ ಕ್ರೀಡಾ ಸ್ಪರ್ಧೆಗಳನ್ನು ವಿವಿಧ ಸ್ಥಳಗಳಲ್ಲಿ ನಡೆಸಿ, ಯಶಸ್ಸನ್ನು ಸಾಧಿಸಿತು. ಕ್ರೀಡೆಯನ್ನು ಆಯೋಜಿಸುವುದು ಬಹಳ ಕಷ್ಟಕರವಾದ ಕೆಲಸ. ಒಂದಷ್ಟು ನಿಷ್ಟುರ, ಅಸಮಾಧಾನ, ಅಪನಂಬಿಕೆ, ಅನುಮಾನ ಇವೆಲ್ಲವನ್ನು ಮೆಟ್ಟಿ ನಿಂತು ಕ್ರೀಡಾ ಸಮಿತಿ ಬಹಳ ತಾಳ್ಮೆಯಿಂದ ಸಮಯಕ್ಕೆ ಸರಿಯಾಗಿ ಕಾರ್ಯಕ್ರಮವನ್ನು ಬಹಳ ಕ್ರೀಡಾತ್ಮಕವಾಗಿ ನಡೆಸಿತು.

ಸಾಂಸ್ಕೃತಿಕ ಸಮಿತಿಯ ಚೇರ್‌ಮೆನ್ ಶ್ರೀ ವಿಜಯ್ ಜೆ. ಶೆಟ್ಟಿ ಹಾಲಾಡಿ ಮತ್ತು ಅವರ ತಂಡ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸುವುದರ ಮೂಲಕ ಕಾರ್ಯಕ್ರಮ ಯಶಸ್ವಿಗೊಳಿಸಿದರು. ಹಿರಿಯರು, ಮಕ್ಕಳು, ಹೆಂಗಸರು, ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದು ವಿಶೇಷವಾಗಿತ್ತು. ಎಲ್ಲರನ್ನು ಸರಿಹೊಂದಿಸಿಕೊಂಡು ಸ್ಪರ್ಧೆಗೊಂದು ಹೊಸ ರೂಪವನ್ನು ಕೊಟ್ಟರು.

ವಿಶೇಷವಾಗಿ ಗುರುಪುರ ಬಂಟರ ಸಂಘ ಆಯೋಜಿಸಿದ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ನಮ್ಮ ಬೆಂಗಳೂರು ಬಂಟರ ಸಂಘದ ಸಾಂಸ್ಕೃತಿಕ ಸಮಿತಿಯು ಭಾಗವಹಿಸಿ ಪ್ರಥಮ ಬಹುಮಾನವನ್ನು ಗಿಟ್ಟಿಸಿಕೊಂಡಿತು. ಭಾಗವಹಿಸಿದ ಎಲ್ಲರಿಗೂ ಅಭಿನಂದನೆಗಳು.

ನಮ್ಮ ಸಂಘವು ಸದಾಕಾಲ ವಿದ್ಯೆ ಮತ್ತು ಅಕ್ಷರಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ಕೊಡುತ್ತಾ ಬಂದಿದೆ. ಪ್ರತಿ ವರ್ಷ ಅದೆಷ್ಟೋ ಗ್ರಾಮಾಂತರ ಹಾಗೂ ನಗರದಲ್ಲಿ ಓದುತ್ತಿರುವ ಮಕ್ಕಳಿಗೆ ಹಣದ ನೆರವನ್ನು ನೀಡುತ್ತಾ ಬಂದಿದೆ. ಈ ವರ್ಷವೂ ವಿದ್ಯಾರ್ಥಿ ವೇತನ ಮತ್ತು ಪ್ರಶಸ್ತಿ ಸಮಿತಿಯ ಚೇರ್‌ಮೆನ್ ಶ್ರೀ ಪ್ರವೀಣ್‌ಚಂದ್ರ ಶೆಟ್ಟಿಯವರ ಸಾರಥ್ಯದಲ್ಲಿ ಜನವರಿ 26ರಂದು ವಿವಿಧ ಕ್ಷೇತ್ರಗಳಲ್ಲಿ ವಿವಿಧ ಸಾಧನೆ ಮಾಡಿದ ಮಕ್ಕಳನ್ನು ಗುರುತಿಸಿ ಅವರ ಪ್ರತಿಭೆಯನ್ನು ಪ್ರೋತ್ಸಾಯಿಸಲಾಯಿತು. ಈ ಪ್ರಯೋಗ ಇಂದಿನ ಮಕ್ಕಳಿಗೆ ಪ್ರೋತ್ಸಾಹವಾಯಿತು.

ಶ್ರೀ ವರಸಿದ್ಧಿ ವಿನಾಯಕ ಮಂದಿರದ ವಾರ್ಷಿಕೋತ್ಸವ ಸಮಾರಂಭ ಭಕ್ತಿಪೂರ್ವಕವಾಗಿ ಮೂಡಿಬಂತು. ಚೇರ್‌ಮೆನ್ ಶ್ರೀ ರಾಜೇಶ್ ಶೆಟ್ಟಿ ಕುತ್ಯಾರು ಮತ್ತು ಅವರ ತಂಡ ಬಹಳ ಸುಂದರವಾಗಿ ಕಾರ್ಯಕ್ರಮವನ್ನು ಆಯೋಜಿಸಿತು. ಬಂದಿರುವ ಭಕ್ತಾದಿಗಳೆಲ್ಲರಿಗೂ ಅನ್ನದಾನವನ್ನು ಶ್ರೀ ರಾಜೇಶ್ ಶೆಟ್ಟಿ ಕುತ್ಯಾರು ಉಣಬಡಿಸಿದರು.

ರಂಗತರಬೇತಿ ಮತ್ತು ಯಕ್ಷಗಾನ ಸಮಿತಿಯ ಚೇರ್‌ಮೆನ್ ಶ್ರೀ ಗುರುಪ್ರಸಾದ್ ಹೆಗ್ಡೆಯವರ ನೇತೃತ್ವದಲ್ಲಿ ಯಕ್ಷಗಾನ ಕಾರ್ಯಕ್ರಮ ಇಡೀ ದಿನ ಮೂಡಿ ಬಂತು. ಮಕ್ಕಳು, ಮಹಿಳೆಯರು ಹಾಗೂ ಸದಸ್ಯರು ಯಕ್ಷಗಾನದಲ್ಲಿ ಗೆಜ್ಜೆ ಕಟ್ಟಿ ಬಣ್ಣ ಹಚ್ಚಿ ಪ್ರೇಕ್ಷಕರಿಗೆ ಹೊಸ ಸಂತಸವನ್ನು ಮೂಡಿಸಿದರು. ಈ ಎಲ್ಲಾ ಚಟುವಟಿಕೆಗಳಲ್ಲಿ ದುಡಿದ, ಭಾಗವಹಿಸಿದ ಮಾನ್ಯರೆಲ್ಲರಿಗೆ ಸಂಘದ ಪರವಾಗಿ ಧನ್ಯವಾದಗಳು.

**ಮಧುಕರ ಎಂ. ಶೆಟ್ಟಿ**
ಗೌರವ ಕಾರ್ಯದರ್ಶಿ

# ನಮ್ಮ ಸಂಸ್ಕೃತಿಯ ಪ್ರತಿಬಿಂಬಗಳು

ಹಬ್ಬಗಳು, ಆಚರಣೆಗಳು ನಮ್ಮ ಸಂಸ್ಕೃತಿಯ ಪ್ರತಿಬಿಂಬಗಳು – ಕೃಷಿ ಪ್ರಧಾನವಾದ ಬಂಟ ಸಮಾಜದ ಎಲ್ಲಾ ಆಚರಣೆಗಳೂ, ಹಬ್ಬಗಳೂ ಕೃಷಿಗೆ ಸಂಬಂಧಪಟ್ಟವುಗಳೇ ಆಗಿವೆ. ಹಿಂದೆ ಕೂಡು ಕುಟುಂಬಗಳಿದ್ದ ಕಾಲದಲ್ಲಿ ಅತ್ಯಂತ ಸಾಂಪ್ರದಾಯಿಕವಾಗಿ ಆಚರಿಸಲ್ಪಡುತ್ತಿದ್ದ ಹಬ್ಬಗಳ ಸಡಗರ, ಸಂಭ್ರಮ ಕ್ರಮೇಣ ಕ್ಷೀಣಿಸುತ್ತಿದ್ದು ಕೃಷಿಯಂತೆಯೇ ಮರೆಯಾಗುತ್ತಿದೆಯೇನೋ ಎನ್ನುವ ಆತಂಕವಿದೆ. ಹಿರಿಯರಿಗೆ ಗತವೈಭವವನ್ನು ನೆನಪಿಸಿಕೊಳ್ಳಲು ಮತ್ತು ನವಪೀಳಿಗೆಗೆ ನಮ್ಮ ಆಚರಣೆಗಳ ವೈಶಿಷ್ಟ್ಯದ ಸೊಬಗನ್ನು ಮನದಟ್ಟು ಮಾಡುವುದಕ್ಕಾಗಿ ಈ ಅಂಕಣ. ಪ್ರಾದೇಶಿಕ ಹಾಗೂ ಭಾಷಿಕ ಭಿನ್ನತೆಗಳು ಆಚರಣೆಗಳಲ್ಲೂ ಪ್ರತಿಫಲಿಸುತ್ತವಾದ್ದರಿಂದ ಇಲ್ಲಿ ತುಳುನಾಡಿನ ದಕ್ಷಿಣ ಹಾಗೂ ಉತ್ತರ ಭಾಗಗಳ ಸಂಪ್ರದಾಯಗಳನ್ನು ಬೇರೆ ಬೇರೆಯಾಗಿ ಚಿತ್ರಿಸಲಾಗಿದೆ.



ನಿರ್ಮಲ ಸಿ. ರೈ.

## ಶಿವರಾತ್ರಿ ಹಬ್ಬ

ಹಿಂದೂಗಳ ಪ್ರಮುಖ ಹಬ್ಬಗಳಲ್ಲೊಂದು ಶಿವರಾತ್ರಿ ಹಬ್ಬ. ವರ್ಷದಲ್ಲಿ ಬರುವ 12 ಶಿವರಾತ್ರಿಗಳಲ್ಲಿ ಶಿಶಿರ ಋತುವಿನ ಮಾಘ ಮಾಸದ ಕೃಷ್ಣ ಪಕ್ಷದ ಚತುರ್ದಶಿಯಂದು ಬರುವ ಮಹಾ ಶಿವರಾತ್ರಿಯ ದಿನ ಭಕ್ತರು ಕೈಲಾಸ ವಾಸಿ ಶಂಭೋ ಶಂಕರನನ್ನು ಪೂಜಿಸಿ, ಆರಾಧಿಸಿ ಪುನೀತರಾಗುತ್ತಾರೆ. ಭಾರತದ ಬಹುತೇಕ ಎಲ್ಲಾ ಭಾಗಗಳಲ್ಲಿಯೂ ಶಿವರಾತ್ರಿ ಹಬ್ಬವನ್ನು ಆಚರಿಸುತ್ತಾರೆ. ಶಿವ ಭಕ್ತರು ಉಪವಾಸವಿದ್ದು ಪೂಜೆ ಮಾಡಿ, ರಾತ್ರಿಯಿಡೀ ಜಾಗರಣೆ ಮಾಡಿ, ಶಿವನನ್ನು ಆರಾಧಿಸುವುದು ಶಿವರಾತ್ರಿಯ ಸಂಪ್ರದಾಯ.

ಪಾರ್ವತಿ ದೇವಿಯು ರಾತ್ರಿಯಿಡೀ ಶಿವನಾಮವನ್ನು ಪಠಿಸುತ್ತಾ ತಪಸ್ಸು ಮಾಡಿ ಶಿವನನ್ನು ಮೆಚ್ಚಿಸಿ ವಿವಾಹವಾದ ದಿನವೇ ಶಿವರಾತ್ರಿ ಎನ್ನಲಾಗುತ್ತದೆ. ಇನ್ನೊಂದು ಕಡೆ ದೇವತೆಗಳು ಮತ್ತು ರಾಕ್ಷಸರ ನಡುವೆ ಸಮುದ್ರ ಮಂಥನ ನಡೆದಾಗ ಜಗತ್ತನ್ನೇ ನಾಶಗೊಳಿಸುವ ಹಾಲಾಹಲದ ಉದ್ಭವವಾಗುತ್ತದೆ. ಲೋಕ ಕಲ್ಯಾಣಾರ್ಥವಾಗಿ ಪರಶಿವನು ಆ ಹಾಲಾಹಲವನ್ನು ತನ್ನೊಡಲಿಗೆ ಸೇವಿಸುತ್ತಾನೆ. ವಿಷವು ಗಂಟಲಿನಿಂದ ಕೆಳಗೆ ಇಳಿಯದಂತೆ ಪತ್ನಿ ಪಾರ್ವತಿ ದೇವಿಯು ತಡೆದ ದಿನವೇ ಶಿವರಾತ್ರಿ ಎನ್ನುತ್ತದೆ ಶಿವ ಪುರಾಣದ ಇನ್ನೊಂದು ಮಹಿಮೆ. ಹೀಗೆ ಶಿವರಾತ್ರಿಯ ಮಹಿಮೆಯ ಬಗ್ಗೆ ಅನೇಕ ಕಥೆಗಳನ್ನು ಸಾರುತ್ತದೆ ಶಿವಪುರಾಣ.

ಶಿವರಾತ್ರಿಯಂದು ಶಿವನ ದೇವಾಲಯಗಳಲ್ಲಿ ಉತ್ಸವವೇ ನಡೆಯುತ್ತದೆ. ರಾತ್ರಿಯೆಲ್ಲ ರುದ್ರ ಪಠಣದ ಮೂಲಕ ಶಿವಸ್ತುತಿ, ಜಾಗರಣೆ ನಡೆಯುತ್ತದೆ. ಅಲ್ಲದೇ ಬಿಲ್ವಾರ್ಚನೆ, ರುದ್ರಾಭಿಷೇಕಗಳ ಮೂಲಕ ಶಿವನನ್ನು ಆರಾಧಿಸಲಾಗುತ್ತದೆ. ಭಕ್ತರು ದೇವಾಲಯಕ್ಕೆ ತೆರಳಿ ಶಿವನ ದರ್ಶನ ಪಡೆದು ಕೃತಾರ್ಥರಾಗುತ್ತಾರೆ. ಆದರೆ ಹಿಂದಿನಿಂದಲೂ ನಮ್ಮ ಕರಾವಳಿಯಲ್ಲಿ ಕೆಲವು ಧಾರ್ಮಿಕ ಆಚರಣೆಗಳು ಜಾನಪದ ಶೈಲಿಯಲ್ಲಿಯೇ ನಡೆದು ಬಂದಿದೆ. ಅಂತೆಯೇ ಮಹಾ ಶಿವರಾತ್ರಿಯನ್ನು ಗ್ರಾಮೀಣ ಪರಂಪರೆಯಲ್ಲಿ ಆಚರಿಸುವ ಸಂಪ್ರದಾಯವೇ ಹಣ್‌ಬಿನ ಹಬ್ಬ.

**ಹಣ್ಬು (ಕಾಮನ ಹಬ್ಬ):** ಹಿಂದೂ ಪುರಾಣದ ಪ್ರಕಾರ ಪರಶಿವನು ಕೋಪದಿಂದ ಉರಿಗಣ್ಣನ್ನು ತೆರೆದು ಕಾಮದಹನಗೊಳಿಸಿದ ಸಂದರ್ಭದ ಪ್ರತಿ ಬಿಂಬಿತವಾಗಿ, ದುಷ್ಟ ಶಕ್ತಿಯ ಸಂಹಾರಕ್ಕಾಗಿ ಶಿವರಾತ್ರಿಯಂದು ಹಣ್‌ಬು ಸುಡುವುದಾಗಿ ನಂಬಿಕೆ. ಕರಾವಳಿಯ ಉತ್ತರದ ಕುಂದಾಪುರದ ಕಡೆಯ


ಹಳ್ಳಿಗಳಲ್ಲಿ ಕೆಲವೆಡೆ ಮೂರು ದಿನ, ಕೆಲವು ಊರುಗಳಲ್ಲಿ ಎರಡು ದಿನ, ಇತ್ತೀಚೆಗೆ ಒಂದು ದಿನ ಹೀಗೆ ಹಣ್‌ಬಿನ ಹಬ್ಬ ಆಚರಿಸುತ್ತಾರೆ. ಹಬ್ಬದ ದಿನ ಮಣ್ಣಿ ಅಥವಾ ಪಾಯಸದಂತಹ ಸಿಹಿ ಖಾದ್ಯಗಳನ್ನು ಮಾಡಿ ಹಂಚುತ್ತಾರೆ. ಬೇರೆ ಹಬ್ಬಗಳಂತೆ ಈ ಹಬ್ಬದ ಆಚರಣೆಯಲ್ಲಿಯೂ ಕೂಡ ಊರಿಂದ ಊರಿಗೆ ಭಿನ್ನತೆ ಕಂಡು ಬರುತ್ತದೆ.

ಹಿಂದಿನಿಂದಲೂ ಪರಂಪರೆಯಾಗಿ ಬಂದ ಹಣಬಿನ ಗದ್ದೆಯಲ್ಲಿ ಬೋಗಿ ಮರದ ದೊಡ್ಡದೊಂದು ಕೊಂಬೆಯನ್ನು ಕತ್ತರಿಸಿ ತಂದು ನಿಲ್ಲಿಸುತ್ತಾರೆ. ಕೆಲವೊಮ್ಮೆ ಮರವನ್ನು ಪಕ್ಕದ ಹಳ್ಳಿಯಿಂದ ಕದ್ದು ತರುತ್ತಾರೆ. ಆ ಮರಕ್ಕೆ ಬುಡದಿಂದ ತುದಿಯವರೆಗೆ ಒಣಹುಲ್ಲನ್ನು (ತಳ್ಪುಲ್ಲ್) ಸುತ್ತುತ್ತಾರೆ. ಊರಿನ ಕೆಲವು ವರ್ಗದ ಪುರುಷರು ಮತ್ತು ಊರಿನ ಗಂಡು ಮಕ್ಕಳೆಲ್ಲ ಸೇರಿ ರಾತ್ರಿ ಮನೆ ಮನೆಗೆ ತೆರಳಿ ಹಣ್‌ಬಿನ ಹಾಡನ್ನು ಹಾಡಿ ಜನರಿಗೆ ಮನರಂಜನೆ ನೀಡುತ್ತಾರೆ. ಊರಿನವರೆಲ್ಲ ಅವರಿಗೆ ಅಕ್ಕಿ, ತೆಂಗಿನಕಾಯಿ, ವೀಳ್ಯ ಅಡಿಕೆ ಮತ್ತು ಹಣವನ್ನು ಗೌರವವಾಗಿ ನೀಡುತ್ತಾರೆ. ಅಮಾವಾಸ್ಯೆಯ ರಾತ್ರಿ ಹಣಬಿನ ಮರಕ್ಕೆ ಬೆಂಕಿ ಹಚ್ಚುತ್ತಾರೆ ಮತ್ತು ಕೆಲವೆಡೆ ರಾತ್ರಿಯಿಡೀ ಅಲ್ಲೇ ಕುಳಿತು ಬೆಂಕಿಯನ್ನು ಕಾಯುವ ಸಂಪ್ರದಾಯವಿದೆ. ಆ ಬೆಂಕಿಯನ್ನು ಯಾರಾದರೂ ಕದ್ದೊಯ್ದರೆ ಮುಂದಿನ ವರ್ಷಗಳಲ್ಲಿ ಆ ಊರಿನಲ್ಲಿ ಹಣ್‌ಬು ಸುಡುವಂತಿಲ್ಲ ಎನ್ನುವುದು ನಂಬಿಕೆ.

ಈ ಆಚರಣೆಯಲ್ಲಿ ಹಣಬಿನ ಜನಪದ ಹಾಡುಗಳು ಬಹಳ ವಿಶಿಷ್ಠವಾಗಿರುತ್ತದೆ. “ಧಿಂ ಸಾಲ್ ಎನ್ನಿರೋ ಧಿಮಿ ಗುಡ್ಕಂಡ್ ಕುಣಿರೋ” ಎಂದು ಒಬ್ಬ ಹಾಡುತ್ತಾನೆ. ಉಳಿದವರೆಲ್ಲ ಒಕ್ಕೊರಲಿನಿಂದ “ಧಿಮ್ಸಾಲ್” ಎನ್ನುತ್ತಾರೆ. ಈ ಹಾಡಿನಲ್ಲಿ ಭಕ್ತಿಯಿಂದ ಪರಶಿವನನ್ನು ಕೊಂಡಾಡುವ ಹಾಡು ಮತ್ತು ಊರಿನ ಮುಖ್ಯಸ್ಥರನ್ನು ಹೊಗಳುವ ಸಾಲುಗಳಿರುತ್ತವೆ. ಹಾಗೆಯೇ ಊರಿನಲ್ಲಿ ಯಾರಲ್ಲಾದರೂ ಅಸಮಾಧಾನವಿದ್ದರೆ ಅವರನ್ನು ಕೆಣಕುವ ಹಾಡಿನ ಜೊತೆಗೆ, ರಾತ್ರಿ ಹೊತ್ತಿನಲ್ಲಿ ಅವರ ಮನೆಗೆ ಒಂದೆರಡು ಕಲ್ಲು ಹೊಡೆಯುವ ತಮಾಷೆ ಕೂಡ ನಡೆಯುತ್ತಿತ್ತು. ಶಿವರಾತ್ರಿ ಹಬ್ಬದ ಕಾರಣ ಸಣ್ಣ ಪುಟ್ಟ ಚೇಷ್ಟೆಗಳಿಗೆ ಕ್ಷಮೆ ಇರುತ್ತದೆ. ಪ್ರಸ್ತುತ ವಿದ್ಯಮಾನದಲ್ಲಿ ಗ್ರಾಮೀಣ ಜನಪದದ ವಿಶಿಷ್ಟ ಸಂಪ್ರದಾಯ ಮತ್ತು ಆಚರಣೆಗಳು ಆಧುನಿಕ ತಂತ್ರಜ್ಞಾನಕ್ಕೆ ಸಿಲುಕಿ ಅನಾಥ-ವಾಗುತ್ತಿರುವುದು ಆತಂಕದ ಸಂಗತಿ.

ನಾದಬ್ರಹ್ಮ ಹಂಸಲೇಖರ ಒಂದು ಜನಪ್ರಿಯ ಹಾಡಿನಂತೆ “ನೀನಿತ್ತ ಕಾಯ, ನಿನ ಕೈಲೆ ಮಾಯ, ಆಗೋದು ಹೋಗೋದು ನಾ ಕಾಣೆನೆ? ನೀಡೂ ಶಿವಾ, ನೀಡದಿರೂ ಶಿವ ಬಾಗುವುದು ನನ್ನ ಕಾಯಾ” ಎನ್ನುತ್ತಾ ಈ ಬಾರಿಯ ಶಿವರಾತ್ರಿಯನ್ನು ಭಕ್ತಿಯಿಂದ ಆಚರಿಸೋಣ. ನಾಡಿನೆಲ್ಲೆಡೆ ಶಾಂತಿ-ಸೌಹಾರ್ದತೆ ನೆಲೆಸಲಿ. ಎಲ್ಲರೂ ನೆಮ್ಮದಿಯಾಗಿರಲಿ ಎಂದು ಪರಮೇಶ್ವರನನ್ನು ಪ್ರಾರ್ಥಿಸೋಣ.

---



**ಸೀತಾರಾಮ ಶೆಟ್ಟಿ ಮಾಣೂರು**

ಹಿಂದೊಮ್ಮೆ ಪುರಾಣ ಕಾಲದಲ್ಲಿ ಬ್ರಹ್ಮದೇವನು ವಿಷ್ಣುವನ್ನು ಕಾಣಲೆಂದು ವೈಕುಂಠಕ್ಕೆ ಹೋದಾಗ ಮಲಗಿರುವ ವಿಷ್ಣುವು ಎದ್ದು ಸ್ವಾಗತ ಮಾಡದಿರುವುದರಿಂದ ಕುಪಿತನಾದ ಬ್ರಹ್ಮನು ವಿಷ್ಣುವನ್ನು ನಿಂದಿಸಿದಾಗ ವಿಷ್ಣುವು “ನೀನು ನನ್ನ ನಾಬಿಯಲ್ಲಿ ಹುಟ್ಟಿರುವುದರಿಂದ ನೀನು ನನ್ನ ಮಗನಾಗಿರುವೆ” ಎಂದಾಗ ಮಾತಿಗೆ ಮಾತು ಬೆಳೆದು ಯುದ್ಧ ಶುರುವಾಗಿ ಕೊನೆಗೆ ವಿಪರೀತಕ್ಕೆ ತಲುಪುತ್ತದೆ. ಆಗ ಶಿವನು ಬಹಳ ಕೋಪಿಷ್ಠನಾಗಿ ಪಾಶುಪತಾಸ್ತ್ರವನ್ನು ಪ್ರಯೋಗಿಸಲು ಯುದ್ಧವನ್ನು ತಡೆಯುವುದಕ್ಕೆ ಅವನು ಆದಿ ಮತ್ತು ಅಂತ್ಯವಿಲ್ಲದ

ಒಂದು ಸ್ತಂಭಾಕಾರವಾಗಲು, ವಿಷ್ಣು ಮತ್ತು ಬ್ರಹ್ಮ ದೇವನು ಯುದ್ಧ ನಿಲ್ಲಿಸಿ ವಿಷ್ಣುವು ಕೂರ್ಮಾವತಾರಿಯಾಗಿಯೂ ಬ್ರಹ್ಮನು ಹಂಸರೂಪಿಯಾಗಿಯೂ ಮೇಲೆ ಹೋಗಿ ಮತ್ತು ವಿಷ್ಣುವು ವರದಾರೂಪಿಯಾಗಿ ಕೆಳಗೆ ಹೋಗಿ ಶೋಧನೆ ಮಾಡುವಷ್ಟರಲ್ಲಿ ಬ್ರಹ್ಮ ಬಂದು "ನಾನು ಅಂತ್ಯ ಕಂಡೆ" ಎಂದು ಸುಳ್ಳು ಹೇಳಿರುವುದಕ್ಕೆ ಕೋಪಿಸಿಕೊಂಡ ಶಿವನು "ಬ್ರಹ್ಮನಿಗೆ ಪೂಜೆ ಸಲ್ಲದು" ಎಂದು ಶಾಪಕೊಟ್ಟು ಆಮೇಲೆ ವಿಶಾಪ ಕೊಟ್ಟು, ವಿಷ್ಣು ಮತ್ತು ಬ್ರಹ್ಮ ದೇವರು ಶಿವನನ್ನೇ ಶಕ್ತಿವಂತನು ಶ್ರೇಷ್ಠ ಎಂದು ಒಪ್ಪಿಕೊಂಡು ಪೂಜೆ ಮಾಡಿದಾಗ ಆ ಆದಿ–ಅಂತ್ಯವಿಲ್ಲದ ಸ್ಥಂಭವು ಲಿಂಗರೂಪವಾಗಿ ಉದ್ಭವ ಆಗಿರುವ ಆ ದಿವಸ "ಮಾರ್ಗಶಿರ ಮಾಸದ ಆರಿದ್ರಾ ನಕ್ಷತ್ರವೇ ಮಹಾ ಶಿವರಾತ್ರಿ" ಯಾಗಿರುತ್ತದೆ. ವಿಷ್ಣು ಮತ್ತು ಬ್ರಹ್ಮ ಶಿವನನ್ನು ಪೂಜೆ ಮಾಡಿದ ದಿನವೇ ಮಹಾಶಿವರಾತ್ರಿ. ಹಗಲು ಉಪವಾಸವಿದ್ದು ರಾತ್ರಿ ಹೊತ್ತು ಜಾಗರಣೆ ಮಾಡಿ ಪಾರ್ವತಿ ಸಮೇತವಾದ ಶಿವಲಿಂಗಕ್ಕೆ ಬಿಲ್ವ ಪತ್ರೆ ಸಮೇತವಾದ ಪುಷ್ಪಾರ್ಚನೆ, ಪೂಜೆ ಮಾಡಿದವರನ್ನು ಶಿವನು ತನ್ನ ಮಗ ಷಣ್ಮುಗನಿಗಿಂತಲೂ ಹೆಚ್ಚು ಪ್ರೀತಿ ಪಾತ್ರರು ಎನ್ನುತ್ತಾನೆ.

ತುಳುನಾಡಿನಲ್ಲಿ ಶಿವರಾತ್ರಿಗೆ ಎಲ್ಲಾ ಹಬ್ಬಗಳಿಗಿಂತ ವಿಶಿಷ್ಟವಾದ ಆಚರಣೆ ಮತ್ತು ಸಂಪ್ರದಾಯವಿದೆ. ಸುಗ್ಗಿ ಕಾಲದ ಕೊಯ್ಲು ಮುಗಿದು ಕೊಳಕೆ ಬೆಳೆ (ಮೂರನೇ ಭತ್ತದ ಬೆಳೆ) ಬಿತ್ತುವುದಕ್ಕೆ ಕೊನೆಯ ಗಡು ಶಿವರಾತ್ರಿ. ಹಾಗೆ ನೀರಾವರಿಯ ಕೊರತೆ ಇರುವ ಜಾಗದಲ್ಲಿ ಬೆಳೆ ಬೆಳೆಯುವವರು ಏನೇ ಅಡಚಣೆ ಇದ್ದರೂ ಕೂಡ ಶಿವರಾತ್ರಿಗಿಂತ ಮೊದಲೇ ಬಿತ್ತನೆ ಮಾಡುವುದು ಪದ್ಧತಿ. ಆಮೇಲೆ ಬಿತ್ತನೆ ಮಾಡಿದರೆ ಫಸಲು ಬರುವುದಿಲ್ಲ ಎನ್ನುವುದು ವಾಡಿಕೆ. ಶಿವರಾತ್ರಿಯಂದು ದೇವಸ್ಥಾನದಲ್ಲಿ ಅರ್ಚನೆ, ಪೂಜೆ, ಭಜನೆಗಳು ನಡೆಯುವುದು ವಾಡಿಕೆಯಾದರೂ ತುಳುನಾಡಿನಲ್ಲಿ ಭೂತಾರಾಧನೆ ವೈಶಿಷ್ಟ್ಯವಾಗಿರುವುದರಿಂದ ದೇವಸ್ಥಾನಕ್ಕೆ ಪ್ರಾಶಸ್ತ್ಯ ಕಡಿಮೆ. ಯುವಕರು ಆ ದಿವಸ ರಾತ್ರಿ ಎಷ್ಟು "ಪೆದಂಬು" ಮಾಡಿದರೂ ಅದು ಆಚರಣೆಯ ಒಂದು ಭಾಗವಾಗಿರುತ್ತದೆಯೇ ಹೊರತು ಅಪರಾಧವಲ್ಲ.

ಹಿಂದಿನ ಕಾಲದಲ್ಲಿ ಯುವಕರು ಗುಂಪು ಗುಂಪಾಗಿ ಸೇರಿ ಯಾರದೋ ತೋಟಕ್ಕೆ ನುಗ್ಗಿ ಎಳನೀರು ಕಿತ್ತು, ಯಾರದೋ ಪಂಪು ಸೆಟ್ಟನ್ನು ಬಿಚ್ಚಿ ಬೇರೆಡೆಗೆ ಸಾಗಿಸುವುದು. ಯಾರದೋ ಹೊಲದಲ್ಲಿರುವ ತರಕಾರಿಯನ್ನು ಮನಸ್ಸೋ ಇಚ್ಛೆ ಕಿತ್ತು, ಯಾರದೋ ಮನೆಗೆ ಕಲ್ಲು ಬಿಸಾಕಿ ಆನಂದಿಸುವುದು ಆಚರಣೆಯ ಒಂದು ಭಾಗವಾಗಿರುತ್ತದೆ. ಆದರೆ ಈಗ ಯುವಕರೆಲ್ಲ ವಿದ್ಯಾವಂತರಾಗಿ ವಲಸೆ ಹೋಗಿರುವುದರಿಂದ ಶಿವರಾತ್ರಿಯ ಸೊಗಡು ಕಮ್ಮಿಯಾಗಿರುತ್ತದೆ. ಆದರೆ ಹಿಂದೆ ಒಂದು ವಾಡಿಕೆ ಇತ್ತು, ಶಿವರಾತ್ರಿಯಂದು ರಾತ್ರಿ ಬೇರೆಯವರ ಮನೆಗೆ ಒಂದು ಕಲ್ಲಾದರೂ ಬಿಸಾಕಬೇಕು ಅಂತ. ಬಿತ್ತನೆಗೆ ಶಿವರಾತ್ರಿ ಒಂದು ಗಡುವು ಆಗಿರುವುದರಿಂದ ಹಳ್ಳಿ ಜನರಿಗೆ ಬಿತ್ತನೆಯ ಸಾಗುವಳಿಯ ಆತುರ ಜಾಸ್ತಿಯಾಗಿತ್ತು. ಆದರೆ ಈಗ ಬಿತ್ತನೆಯೂ ಇಲ್ಲ ಆತುರವೂ ಇಲ್ಲ. ವಾತಾವರಣದಲ್ಲಿ ಕೂಡಾ ಬದಲಾವಣೆಗೆ ಶಿವರಾತ್ರಿಯಂದು ಗಡುವು ಇದೆ. ಎಂತಹ ಚಳಿಗಾಲವಿದ್ದರೂ ಮಂಜು ಬೀಳುವ ವಾತಾವರಣವಿದ್ದರೂ ಕೂಡ ಶಿವರಾತ್ರಿಯಂದು ಅದು ಕೊನೆಯದಾಗಿ ಮಾರನೇ ದಿನದಿಂದ ಸೆಕೆಗಾಲ ಶುರುವಾಗುತ್ತದೆ.

ಈ ವರ್ಷದ ಶಿವರಾತ್ರಿಯು ಫೆಬ್ರವರಿ ತಿಂಗಳ 21ನೇ ತಾರೀಕಿನಂದು ಅಂದರೆ ಕುಂಭ ಮಾಸದ ತುಳುವಿನ "ಮಾಯಿ" ತಿಂಗಳ ತ್ರಯೋದಶಿಯಂದು ಬರಲಿದೆ. ಈ ವರ್ಷದ ಶಿವರಾತ್ರಿಯು ಸಮಾಜದ ಸಮಸ್ತ ಬಂಧುಗಳಿಗೂ ಆ ಪರಶಿವನು ಆಯುರಾರೋಗ್ಯ ಭಾಗ್ಯ ಸಕಲ ಸಮೃದ್ಧಿಯನ್ನು ಕರುಣಿಸಲೆಂದು ಪ್ರಾರ್ಥಿಸೋಣ.

# Father's Role as Chowkidar



B. Dinakar Shetty

Family is a group of people assigned to us to give us our deepest love as well as emotion and pain. We learn and grow from them. Father, the very word itself is heavy. When it comes to his children or family, they are his utmost responsibility. In management class and leadership courses, we always hear that leadership is not a status but a responsibility. The one who practises this more than 100% is a father.

Unlike mother, father is not a bundle of love. A mother brings the child to the world, whereas a father introduces the world to the child. Father finds his happiness in his family's comfort. He may break from within silently, but doesn't give any indication to the outside world.

While a mother always gets her due aplenty, glorified, poor father doesn't. Mother gets the credit for the child's upbringing. A mother feeds, has soothing charm in her warmth, but a father seems to be an emotionless person. Even while sinking inside, on the outside he appears tough. He will undergo any hardship without a blink for his child. When a mother prepares the road to suit her child, a father prepares his child for the road.

Father is a friend, philosopher, guide and hero to his child. He knows that life is not a bed of roses and helps his children to make it one, cautioning them, that there are enough thorns to handle. Also, he does everything in his will, to protect his child from all the adversities of the world.

He also takes up the responsibility of inculcating value systems in his children. He never gives them false hope saying life is beautiful. He does not advise them to become rich, but instead to be happy, have happy memories, happy relationships and live happily. He teaches the child that if you don't stand up for something, you tend to fall for everything.

Early upbringing has a deep impact on the child. A child's mind is like fertile soil. Whatever you sow, that you will reap, good, bad, ugly, etc. Children don't do what we say, they do what we do. A father's role is a roller coaster ride; some ups, steep downs & a lot of sad & joyful moments. He is in a position to make an impact on the physical, intellectual and emotional level of the child. A father has the primary responsibility of building a strong next generation individual who is capable of dealing with significant adversity with minimum disturbance.

# ಮರೆಯಲಾಗದ ಬಾಲ್ಯ



ಅನುಷಾ ಶೆಟ್ಟಿ

'ಬಾಲ್ಯ' ಇದು ಪ್ರತಿಂಯೊಬ್ಬರ ಜೀವನದ ಅತ್ಯಮೂಲ್ಯ ಕ್ಷಣ. ಅಚ್ಚಳಿಯದ ನೆನಪಿನ ಬುತ್ತಿ, ಮರಳಿ ಬಾರದ ಅಪೂರ್ವ ಅನುಭವ, ಬಾಹ್ಯ ಪ್ರಪಂಚದ ಜಂಜಾಟ, ವ್ಯಾಮೋಹಗಳ ಪರಿವೆಯೇ ಇರದ ಸ್ವಚ್ಛಂದ ಜೀವನ.

ಬಾಲ್ಯದ ಆ ದಿನಗಳು ಸುಂದರ ಅನುಭವಗಳ, ಸವಿನೆನಪುಗಳ ಅಂದವಾದ ತೋಟ. ನೆನೆದಷ್ಟು ಹಿತವೆನಿಸುವ ಮಧುರವಾದ ಪಯಣ. ದ್ವೇಷ, ಅಸೂಯೆ, ಮೇಲು-ಕೀಳು, ಬಡವ-ಶ್ರೀಮಂತ, ಆಸ್ತಿ, ಹಣ, ಸಂಪತ್ತು ಇದ್ಯಾವುದರ ಗಂಧ-ಗಾಳಿಯಿಲ್ಲದೇ ನೆರೆಹೊರೆಯ ಸ್ನೇಹಿತರೊಂದಿಗೆ ಬೆರೆತು ಆಡಿದ ಚೇಷ್ಟೆಗಳು, ಮಾಡಿದ ತುಂಟಾಟಗಳು, ಮುಗ್ಧತೆ ಇವೆಲ್ಲದರ ಸಂಗಮವೇ ಬಾಲ್ಯ. ಈ ಪದವನ್ನು ಕೇಳಿದ ತಕ್ಷಣ ಎಲ್ಲರ ಬಾಲ್ಯದ ಸವಿ ನೆನಪುಗಳು ಕಣ್ಣಮುಂದೆ ಹಾದು ಹೋಗುತ್ತವೆ. ಇದರ ಸವಿ ಅನುಭವ ನಗರದ ಮಕ್ಕಳಿಗಿಂತ ಹಳ್ಳಿಯಲ್ಲಿ ಹುಟ್ಟಿ ಬೆಳೆದ ಮಕ್ಕಳಿಗೆ ಹೆಚ್ಚಾಗಿ ಅನುಭವವಾಗಿರುತ್ತದೆ.

ಬಾಲ್ಯದಲ್ಲಿ ಆಡುತ್ತಿದ್ದ ಲಗೋರಿ, ಗೋಲಿ, ಮರಕೋತಿ, ಕಣ್ಣಾಮುಚ್ಚಾಲೆ, ಕಬಡ್ಡಿ, ಕುಂಟಾಟ, ಕುಂಟೆ ಬಿಲ್ಲೆ ಹೀಗೆ ಅನೇಕ ಹಳ್ಳಿ ಸೊಗಡಿನ ಆಟಗಳನ್ನು ಸಂಭ್ರಮಿಸುತ್ತಿದ್ದೆವು. ಜಗಳವಾಡಿ, ಕಿತ್ತಾಡಿ (ಮನೆಯವರಿಂದ) ಕ್ಷಣ ಮಾತ್ರದಲ್ಲಿ ಒಂದಾಗಿ ಮತ್ತೆ ಆಡುತ್ತಿದ್ದ ದಿನಗಳು, ಶಾಲೆ ಮುಗಿಸಿ ಬಂದು ಕತ್ತಲಾಗುವವರೆಗೆ ಸಾಗುತ್ತಿದ್ದ ನಮ್ಮ ಆಟಗಳು, ಕಾಡು ಸುತ್ತಿ ಗರಚಿನ ಹಣ್ಣು, ಕೆಸ್ಕಾರ ಹಣ್ಣು, ಶಳ್ಳೆ ನೇರಳೆ ಹಣ್ಣುಗಳನ್ನು ತಿನ್ನುತ್ತಿದ್ದ ಆ ದಿನಗಳು ನೆನಪು ಮಾತ್ರ. ಭಾನುವಾರ ಬಂತೆಂದರೆ ಎಲ್ಲಾ ಮಕ್ಕಳೂ ಸೇರಿ ಡಿಡಿ-1 ನಲ್ಲಿ ಬರುತ್ತಿದ್ದ ರಾಮಾಯಣ, ಮಹಾಭಾರತ, ಶಕ್ತಿಮಾನ್ ನೋಡಲು ಪಡುತ್ತಿದ್ದ ಕಾತುರ, ಸಂಜೆ 4 ಕ್ಕೆ ಚಂದನ ವಾಹಿನಿಯಲ್ಲಿ ಬರುವ ಸಿನಿಮಾ ನೋಡಿ ಖುಷಿ ಪಡುತ್ತಿದ್ದ ಬಗೆ, ಈಗ ದಿನಕ್ಕೆ 100 ಸಿನಿಮಾ ನೋಡಿದರೂ ಸಿಗುವುದಿಲ್ಲ. ಚಿಟ್ಟೆ ಹಿಡಿಯುವುದು, ಹಾಂತಿ ಬಾಲಕ್ಕೆ ದಾರ ಕಟ್ಟಿ ಹಾರಿ ಬಿಡುತ್ತಿದ್ದ ದಿನಗಳು, ತೋಟದಲ್ಲಿರುವ ತೋಡಿನಲ್ಲಿ ಮೀನು ಹಿಡಿಯುತ್ತಿದ್ದ ಬಗೆ, ಮರಳಲ್ಲಿ ಕಾಲು ಇಟ್ಟು ಗೂಡು ಕಟ್ಟಿದ್ದು, ಅಡಿಕೆ ಸೋಗೆಯನ್ನು ಬಳಸಿ ಮನೆ ಕಟ್ಟಿದ್ದು, ಮಳೆಗಾಲದಲ್ಲಿ ದೋಣಿ ಮಾಡಿ ನೀರಿನಲ್ಲಿ ಬಿಟ್ಟು ಸಂಭ್ರಮಿಸಿದ್ದು ಎಲ್ಲವೂ ಒಂದಕ್ಕಿಂತ ಒಂದು ಮಧುರ. ಪೇರಳೆ ಹಣ್ಣು, ಮಾವಿನ ಹಣ್ಣು, ಗೇರು-ಹಣ್ಣು ಸಂಗ್ರಹಿಸಿ ಆಡಿದ್ದು, ತಿಂದಿದ್ದು, ಮಾವಿನ ಮರದ ಕೆಳಗೆ ಕುಳಿತು ಮಾವಿನ ಹಣ್ಣಿಗಾಗಿ ಅಳಿಲನ್ನು ಕೇಳಿದ್ದು. ಅಲ್ಲೇ ರಸಾಯನ ಮಾಡಿ ಹಂಚಿದ್ದು, ಪೇಪರ್ ಚೆಂಡು ಮಾಡಿ ಲಗೋರಿ ಆಡಿದ್ದು, ಅಜ್ಜ, ಅಜ್ಜಿಯ ಪಕ್ಕ ಮಲಗಿ ಕಥೆ ಕೇಳಿದ್ದು, ಸಂಭ್ರಮದಿಂದ ಆಚರಿಸುತ್ತಿದ್ದ ಹಬ್ಬಗಳು, ದೀಪಾವಳಿಗೆ ಎಣ್ಣೆ ಸ್ನಾನ ಮಾಡಿ ಕೇಪ್ ಪಟಾಕಿ ಹೊಡೆದು ಖುಷಿ ಪಟ್ಟಿದ್ದು ಇನ್ನೂ ಅದೆಷ್ಟೋ ಕ್ಷಣಗಳು ಹಾಗೆಯೇ ಕಣ್ಣ ಮುಂದೆ ಹಾದು ಮಾಯವಾಗುತ್ತವೆ.

ಬಾಲ್ಯದ ನೆನಪುಗಳೇ ಹಾಗೆ, ಚಿಕ್ಕ ಚಿಕ್ಕ ವಿಷಯಗಳಿಗೂ ಮನಸಾರೆ ಸಂಭ್ರಮಿಸುತ್ತಿದ್ದ ದಿನಗಳು. ನಾಲ್ಕಾಣೆ, ಎಂಟಾಣೆ ಕೊಟ್ಟು ತಿನ್ನುತ್ತಿದ್ದ ಬೆಲ್ಲದ ಕ್ಯಾಂಡಿಯಲ್ಲಿ ಸಿಗುತ್ತಿದ್ದ ಖುಷಿ ಇವತ್ತಿನ ಮಕ್ಕಳಿಗೆ ನೂರಾರು ರೂಪಾಯಿಯ ಐಸ್‌ಕ್ರೀಂ, ಚಾಕಲೇಟ್‌ಗಳಲ್ಲಿ ಸಿಗುತ್ತಿಲ್ಲ. ಕಾಂಕ್ರೀಟ್ ಕಾಡಿನಲ್ಲಿ ಬೆಳೆಯುತ್ತಿರುವ ಮಕ್ಕಳಿಗೆ ಇದ್ಯಾವುದರ ಮಹತ್ವದ ಅರಿವಿಲ್ಲ, ಬಾಲ್ಯದ ಅನುಭವಕ್ಕೆ ಅವಕಾಶವೂ ಇಲ್ಲ.

ಇಂದು ಬಾಲ್ಯದ ಪರಿಕಲ್ಪನೆಯೇ ಬದಲಾಗಿದೆ. ಕೇವಲ ಯಾಂತ್ರಿಕ ಬದುಕು. ಕೇವಲ 3 ವರ್ಷದ ಮಗು ಶಾಲೆ ಮುಗಿಸಿ ಬಂದರೆ ಹೋಂವರ್ಕ್, ಶಾಲೆಗೆ ಹೋದರೆ ಕ್ಲಾಸ್ ವರ್ಕ್‌ಗಳ ಒತ್ತಡಕ್ಕೆ ಸಿಲುಕಿ ಮಕ್ಕಳ ಬಾಲ್ಯ ಹೇಳ ಹೆಸರಿಲ್ಲದಂತೆ ಮಾಯವಾಗುತ್ತಿದೆ. ಬಿಡುವಿನ ಸಮಯದಲ್ಲಿ ಮೊಬೈಲ್, ಟಿವಿ ಕಾರ್ಟೂನ್, ಗೇಮ್‌ಗಳು, ಯುಟ್ಯೂಬ್ ವಿಡಿಯೋಗಳಂತಹ ಮಾಯಾ ಲೋಕದಲ್ಲಿ ಮುಳುಗಿ ಬಿಡುತ್ತಾರೆ. ನೆರೆಹೊರೆಯ ಮಕ್ಕಳೊಂದಿಗೆ ಬೆರೆಯಲು ತಂದೆ-ತಾಯಿ ಒಪ್ಪುವುದಿಲ್ಲ. ತಮ್ಮ ಮಕ್ಕಳೊಂದಿಗೆ ಕಾಲಕಳೆಯಲು

ತಂದೆ ತಾಯಿಗೆ ಬಿಡುವಿಲ್ಲ. ಕಥೆ ಹೇಳಲು ಅಜ್ಜ–ಅಜ್ಜಿಯಿಲ್ಲ, ಕಥೆ ಕೇಳುವ ಮನಸ್ಸು ಮಕ್ಕಳಿಗಿಲ್ಲ, ಕೃತಕ ಆಟ ಸಾಮಾಗ್ರಿಗಳೊಂದಿಗೆ ಯಾಂತ್ರಿಕ ಆಟ ಆಡುವ ಪುಟ್ಟ ಮನಸ್ಸುಗಳ ಏಕಾಂಗಿ ಜೀವನ. ಬೇಸಿಗೆ ರಜೆ ಬಂತೆಂದರೆ ಸಮ್ಮರ್ ಕ್ಯಾಂಪ್, ಊರಿಗೆ ಹೋಗಲೂ ಬಿಡುವಿಲ್ಲ. ಹೋದರೂ ಎಲ್ಲದಕ್ಕೂ ಕಡಿವಾಣ, ಏನು ತಿಂದರೂ ಹೈಜಿನಿಕ್, ಎಲ್ಲಿ ಹೋದರೂ ಬಂದರೂ ಹೈಜಿನಿಕ್. ನಮಗೆ ಈ ಪದದ ಅರ್ಥವೇ ತಿಳಿದಿರಲಿಲ್ಲ ಬಾಲ್ಯದಲ್ಲಿ.

ಇದೆಂಥಾ ಬಾಲ್ಯ? ಬಾಲ್ಯವೆನ್ನುವ ಸುಮಧುರ ಕ್ಷಣಗಳಿಂದ ಮಕ್ಕಳು ದೂರವಾಗುತ್ತಿದ್ದಾರೆ. ಈ ಪರಿಸ್ಥಿತಿ ಕೇವಲ ನಗರಗಳಲ್ಲಿ ಮಾತ್ರವಲ್ಲ, ಹಳ್ಳಿಗಳಲ್ಲೂ ಸಾಮಾನ್ಯವಾಗಿದೆ. ಕಾನ್ವೆಂಟ್ ಮಕ್ಕಳು, ಧರೆಗುಳಿದ ಕಾಡುಗಳು, ಆಧುನೀಕತೆಯ ಒಲವು, ಬದಲಾದ ಜನರ ಮನಸ್ಥಿತಿ ಎಲ್ಲವೂ ಬಾಲ್ಯವನ್ನು ಅರ್ಥಹೀನ–ಗೊಳಿಸುತ್ತಿರುವುದು ವಿಷಾದನೀಯ.

ಬಾಲ್ಯದ ಅನುಭವವೆನ್ನುವುದು ಮಾತಿಗೆ ನಿಲುಕದ್ದು. ಈ ಸುಂದರ ಕ್ಷಣಗಳ ಕ್ಷಣಿಕ ಅನುಭವವನ್ನಾದರೂ ನಮ್ಮ ಮಕ್ಕಳಿಗೆ ನೀಡುವ ಪ್ರಯತ್ನ ಮಾಡೋಣ.

ಇರುವುದೊಂದೇ ಜೀವನ
ಸಿಗುವುದು ಕೆಲವೇ ದಿನ
ತಿಳಿಯದೇ ಕಳೆವ ಬಾಲ್ಯ
ಗೊತ್ತಿಲ್ಲದೇ ಜಾರುವ ಹರೆಯ
ಕರೆಯದೇ ಬರುವ ಮುದಿತನ
ಎಲ್ಲವನ್ನು ಅನುಭವಿಸುತ್ತಾ
ಬಾಳುವುದೇ ಬದುಕು

## ಕವನ

ಮಸಣದಲ್ಲಿ ಬಿದ್ದ ಬೀಜ
ಫಸಲು ಕೊಡದೆ ಇರುವುದೇ ..?
ಆ ಫಸಲ ಹಣ್ಣಿನಲ್ಲಿ ಸಿಹಿಯು
ಇಲ್ಲದೇ ಇರುವುದೇ ...?
ಭೂಮಿ ತೋರೋ ಪ್ರೀತಿಯಲ್ಲಿ
ತಾರತಮ್ಯ ಎಲ್ಲಿದೆ ...?
ನಮ್ಮಲ್ಲಿ ಬೆಳೆಯಲಿ ಇದೇ ಮನೋಧರ್ಮವೂ...

ಜಾತಿ ಬೇರೆ .. ಭಾಷೆ ಬೇರೆ..ಸಂಸ್ಕಾರ ಬೇರೆ..
ನೀತಿ ಬೇರೆ ಬೇರೆ..ಇದ್ದರೂ...
ಬಿದ್ದಾಗ ಕರೆವೆ ಒಡಲಾಳದಿಂದ
"ಅಮ್ಮ" ಎಂಬ ಅಕ್ಷರ ...
ಮತ್ತೇಕೆ ನೋಯಿಸುವೆ ಹತ್ತಾರು
ಹೆತ್ತ ಒಡಲನು ....?
ಯಾರು ಕೊಟ್ಟರು ನಿನಗೆ ಈ ವರವನು ...?

ಅರಸನಾದರೂ .. ಆಳು ಆದರೂ ..
ತಿನ್ನುವ ಅನ್ನವೊಂದೇ ...
ಕುಡಿವ ಜಲವೂವೊಂದೇ ..
ಮತ್ತೇಕೇ ಈ ತಾರತಮ್ಯ ..ಮತ್ಸರ ..?
ಮೇಲುಕೀಳು ಬಡವಬಲ್ಲಿದ ಎಂದು ಅಳೆವ
ಮೊಂಡುತನದ ಜೀವನ ..?
ಎಲರಲ್ಲಿ ಒಂದಾಗಿ ನಾವು ಬಾಳೋಣ .

ಮೂರುದಿನದ ಈ ಬಾಳಿನಲ್ಲಿ
ಅಂದಚಂದವೆಂಬುದು
ನಮ್ಮ ಮನದ ಭ್ರಾಂತಿಯು ..
ಎದೆಯೊಳಗೆ ನೀ ಬೆಳಗು
ಸಮಚಿತ್ತದ ದೀಪವ.
ಆ ದೀಪದ ಬೆಳಕಿಂದ ಬೆಳಗು
ನೂರಾರು ಬೇರೆ ದೀಪ..
ನಿನಗೂ ಕೆಲವರ ಬಾಳಿನ ಸಂದೀಪ..

ಕ್ಷಣ ಕ್ಷಣವೂ ದಿನದಿನವೂ
ವಿಶೇಷ ಎಂದು ತಿಳಿದುಕೋ ..
ಎಲ್ಲಾ ಸಮಯ ಎಲ್ಲಾ ಘಳಿಗೆ
ಶ್ರೇಷ್ಠ ಎಂದು ಅರಿತುಕೋ ..
ಉತ್ಕೃಷ್ಟವಾಗಿ ಬಾಳುವುದೇ
ಜೀವನ ತತ್ವ ಎಂದುಕೋ ..
ಬಾಳಿನಲ್ಲಿ "ಪ್ರೀತಿ ..ಮಮತೆ..ಕರುಣೆ "
ಎಂಬ ಒಲವ ದೀಪ ಬೆಳಗಿಸು.

**– ಜಯಲಕ್ಷ್ಮಿ ಸಿ. ಶೆಟ್ಟಿ**

# ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರದ 20ನೇ ವಾರ್ಷಿಕೋತ್ಸವ ಸಮಾರಂಭ

ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರದ ಪ್ರಾಂಗಣದಲ್ಲಿ 20ನೇ ವಾರ್ಷಿಕೋತ್ಸವವನ್ನು ದಿನಾಂಕ 19.01.2019ನೇ ಭಾನುವಾರದಂದು ವಿಜೃಂಭಣೆಯಿಂದ ಆಚರಿಸಲಾಯಿತು.

ನಮ್ಮ ಸಂಘದ ಅಧಿದೇವತೆ ಶ್ರೀ ವರಸಿದ್ಧಿ ವಿನಾಯಕನ ಅನುಗ್ರಹದಿಂದ ನಾವು ಆಯೋಜಿಸಿರುವ ಕೆಲವು ಪ್ರಮುಖ ಕಾರ್ಯಗಳನ್ನು ಈಗಾಗಲೇ ನಿರ್ವಿಘ್ನವಾಗಿ ಪೂರ್ಣಗೊಳಿಸಲಾಗಿದೆ. ಒಂದು ಆಲೋಚನೆ ಹಲವಾರು ಉತ್ತಮ ಕಾರ್ಯಗಳಿಗೆ ಪ್ರೇರಣೆಯಾಗುತ್ತದೆ ಎಂಬುದು ಇದರಿಂದ ವಿಧಿತವಾಗುತ್ತದೆ. ಪೂರ್ವಾಹ್ನ 8.00 ಗಂಟೆಗೆ ಫಲ ಪಂಚಾಮೃತ ಅಭಿಷೇಕ, ಗಣಹೋಮ ಇತ್ಯಾದಿ ಪೂಜಾ ಕಾರ್ಯಕ್ರಮಗಳೊಂದಿಗೆ ಶ್ರೀ ಆರ್. ಉಪೇಂದ್ರ ಶೆಟ್ಟಿ ದಂಪತಿಗಳು, ಗೌರವ ಕಾರ್ಯದರ್ಶಿ ಶ್ರೀ ಮಧುಕರ ಎಂ. ಶೆಟ್ಟಿ ದಂಪತಿಗಳು ಹಾಗೂ ಪ್ರಾರ್ಥನಾ ಮಂದಿರ ಸಮಿತಿಯ ಚೇರ್‌ಮೆನ್ ಶ್ರೀ ರಾಜೇಶ್ ಶೆಟ್ಟಿ ಕುತ್ಯಾರು ದಂಪತಿಗಳ ಪೂಜಾ ದೀಕ್ಷೆಯೊಂದಿಗೆ ಹಾಗೂ ಸಾವಿರಾರು ಭಕ್ತರ ಉಪಸ್ಥಿತಿಯಲ್ಲಿ ಗಣಹೋಮವನ್ನು ನಡೆಸಲಾಯಿತು.

ಬೆಳಿಗ್ಗೆ 10.00 ಗಂಟೆಗೆ ಸಂಘದ ಯಕ್ಷಗಾನ ಕೇಂದ್ರದ ವಿದ್ಯಾರ್ಥಿಗಳಿಂದ 'ಸೀತಾ ವಿಯೋಗ', 'ಕುಶ–ಲವ' ಮಕ್ಕಳ ಯಕ್ಷಗಾನ ಕಾರ್ಯಕ್ರಮ ಸಂಘದ ಆವರಣದಲ್ಲಿ ಅತ್ಯಂತ ಅದ್ದೂರಿಯಾಗಿ ನೆರವೇರಿ ಜನಮೆಚ್ಚುಗೆಗೆ ಪಾತ್ರವಾಯಿತು. ಮಧ್ಯಾಹ್ನ 12.00 ಗಂಟೆಗೆ ಮಹಾಮಂಗಳಾರತಿ ನಡೆಯಿತು. ಸುಮಾರು 2000 ಮಂದಿ ಭಕ್ತಾದಿಗಳಿಗೆ ಅನ್ನ ಸಂತರ್ಪಣೆಯನ್ನು ನೀಡಲಾಯಿತು. ಮಧ್ಯಾಹ್ನ 2.00 ಗಂಟೆಗೆ ಸಭಾ ಕಾರ್ಯಕ್ರಮ ನಡೆಯಿತು. ಸಭಾ ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಆಗಮಿಸಿದ ಸಂಘದ ಮಾಜಿ ಅಧ್ಯಕ್ಷರಾದ ಶ್ರೀ ಹರೀಶ್ ಕುಮಾರ್ ಶೆಟ್ಟಿಯವರು ಪ್ರಾರ್ಥನಾ ಮಂದಿರದ ಬಗ್ಗೆ ಮೆಚ್ಚುಗೆಯ ಮಾತನಾಡಿ ಸಂಘದ ಈಗಿನ ಅಧ್ಯಕ್ಷರ ಕಾರ್ಯ ವೈಖರಿಗೆ ಮೆಚ್ಚುಗೆ ವ್ಯಕ್ತ ಪಡಿಸಿದರು.

ಮಧ್ಯಾಹ್ನ 2.30 ಗಂಟೆಗೆ ಸಂಘದ ಮಹಿಳಾ ಕಲಾವಿದರಿಂದ ಯಕ್ಷ ನೃತ್ಯ ರೂಪಕವು ಮನಮೋಹಕವಾಗಿ



ಮೂಡಿಬಂತು. ನಂತರ ಸಂಘದ ಸದಸ್ಯರು ಹಾಗೂ ಖ್ಯಾತ ಅತಿಥಿ ಕಲಾವಿದರ ಕೂಡುವಿಕೆಯಲ್ಲಿ 'ಬಬ್ರುವಾಹನ ಕಾಳಗ' ಯಕ್ಷಗಾನವು ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಯಿತು.

ಸಂಘದ ಮಾಜಿ ಅಧ್ಯಕ್ಷರುಗಳು, ಮಾಜಿ ಪದಾಧಿಕಾರಿಗಳು, ಮಾಜಿ ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ಸಂಘದ ಹಾಲಿ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಸಂಘದ ಸದಸ್ಯರು ಭಾಗವಹಿಸಿ ಶ್ರೀ ವರಸಿದ್ಧಿ ವಿನಾಯಕ ದೇವರ ಕೃಪೆಗೆ ಪಾತ್ರರಾದರು.

'ಧರ್ಮೋರಕ್ಷತಿ ರಕ್ಷಿತಃ' ಯಾರು ಧರ್ಮವನ್ನು ಕಾಪಾಡುತ್ತಾರೋ ಅವರನ್ನು ಧರ್ಮ ರಕ್ಷಿಸುತ್ತದೆ. ಹಾಗೆಯೇ ಈ ಬಾರಿ ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರದ 20ನೇ ವಾರ್ಷಿಕೋತ್ಸವ ವಿಜೃಂಭಣೆಯಿಂದ ಜರುಗಿ ಬಂಟ ಸಮುದಾಯದ ಜೊತೆಗೆ ನಮ್ಮ ಪರಿಸರದ ಜನತೆ ಸೇರಿಕೊಂಡು ಒಂದು ಉತ್ಸವವೇ ನಡೆಯಿತು ಎಂದರೆ ತಪ್ಪಾಗಲಾರದು. ಈ ಸಂದರ್ಭದಲ್ಲಿ ಹಲವಾರು ದಾನಿಗಳು ನಮ್ಮೊಂದಿಗೆ ಕೈ ಜೋಡಿಸಿದ್ದಾರೆ. 2000 ಜನ ಭಕ್ತಾದಿಗಳಿಗೆ ಅನ್ನಸಂತರ್ಪಣೆಯ ವ್ಯವಸ್ಥೆಯನ್ನು ಸೇವಾ ಕೈಂಕರ್ಯ ರೂಪದಲ್ಲಿ ನೀಡಿದ ಪ್ರಾರ್ಥನಾ ಮಂದಿರ ಸಮಿತಿಯ ಚೇರ್‌ಪರ್ಸನ್‌ರವರಾದ ಶ್ರೀ ರಾಜೇಶ್ ಶೆಟ್ಟಿ ಕುತ್ಯಾರು ದಂಪತಿಗಳಿಗೆ, ಚಪ್ಪರ ಸೇವೆಯನ್ನು ಸತತ 20 ವರ್ಷಗಳಿಂದ ನೀಡುತ್ತಿರುವ ಶ್ರೀ ಇರ್ಮಾಡಿ ಜಯಪ್ರಸಾದ್ ಶೆಟ್ಟಿ ದಂಪತಿಗಳಿಗೆ, ಭಕ್ತಾದಿಗಳಿಗೆ ಲಡ್ಡು ಪ್ರಸಾದವನ್ನು ನೀಡಿದ ಸಂಘದ ಉಪಾಧ್ಯಕ್ಷರಾದ ಶ್ರೀ ಭೋಜರಾಜ್ ಶೆಟ್ಟಿ

ಕೊರ್ಗಿ ಹಾಗೂ ಐಶ್ವರ್ಯ ಫೈನಾನ್ಸ್ ಕೋರಮಂಗಲದ ಮಾಲೀಕರಾದ ಮೋರ್ಟುರ್ ಶ್ರೀ ಚಂದ್ರಶೇಖರ ಶೆಟ್ಟಿ ದಂಪತಿಗಳಿಗೆ, ಹೂವಿನ ಅಲಂಕಾರದ ವ್ಯವಸ್ಥೆಯನ್ನು ನೀಡಿದ ಕೂಲ್ ಕಾರ್ನರ್ ಬಸವನಗುಡಿ ಇದರ ಮಾಲೀಕರಾದ ಶ್ರೀ ಸುಧಾಕರ್ ಶೆಟ್ಟಿ ದಂಪತಿಗಳಿಗೆ, ವರ್ಷಂಪ್ರತಿಯಂತೆ ಲಡ್ಡು ಪ್ರಸಾದವನ್ನು ನೀಡುತ್ತಿರುವ ಶ್ರೀಮತಿ ರಾಜಮ್ಮ ಹೆಗ್ಡೆಯವರಿಗೆ, ಸಂಜೆ ಉಪಾಹಾರದ ವ್ಯವಸ್ಥೆಯನ್ನು ಮಾಡಿದ ಶ್ರೀ ಸುಬ್ರಹ್ಮಣ್ಯ ಶೆಟ್ಟಿ ತಂತ್ರಾಡಿ ದಂಪತಿಗಳಿಗೆ, ಮೆಟ್ರೋ ಆವರಣದ ಜಾಗಕ್ಕೆ ದೇಣಿಗೆಯನ್ನು ನೀಡಿ ಉಪಯೋಗಿಸಲು ಸಹಕರಿಸಿದ ಶ್ರೀ ಕೆ. ರತ್ನಾಕರ ಶೆಟ್ಟಿ ದಂಪತಿಗಳಿಗೆ, ಯಕ್ಷಗಾನ ಸಮಿತಿಯ ವತಿಯಿಂದ ಯಕ್ಷಗಾನ ಕಾರ್ಯಕ್ರಮವನ್ನು ನೀಡಿದ ಶ್ರೀ ಗುರುಪ್ರಸಾದ್ ಹೆಗ್ಡೆ ದಂಪತಿಗಳಿಗೆ ಸಂಘದ ಹಾಗೂ ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರ ಸಮಿತಿಯ ಪರವಾಗಿ ಹೃತ್ಪೂರ್ವಕ ವಂದನೆಗಳು.

ಮುದ್ರಣದ ವ್ಯವಸ್ಥೆಯನ್ನು ನೀಡಿದ ಕರಾವಳಿ ಪ್ರಿಂಟರ್ಸ್‌ನ ಮಾಲೀಕರಾದ ಶ್ರೀ ಶಾಂತರಾಮ ಶೆಟ್ಟಿ ದಂಪತಿಗಳಿಗೆ, ನಿತ್ಯ ಪೂಜೆಗೆ ದೇವರಿಗೆ ಹೂವಿನ ಸೇವೆಯನ್ನು ನೀಡುತ್ತಿರುವ ರಾಜ್ ಎಲೆಕ್ಟ್ರಿಕಲ್ಸ್‌ನ ಮಾಲೀಕರಾದ ಶ್ರೀ ನಾಗಾರಾಜ್ ರೈ ದಂಪತಿಗಳಿಗೆ, ತೆಂಗಿನಕಾಯಿ ಸೇವೆಯನ್ನು ನೀಡುತ್ತಿರುವ ಎಸ್.ಎಲ್.ವಿ ಸ್ವೀಟ್ಸ್ & ಕಾಂಡಿಮೆಂಟ್ಸ್‌ನ ಮಾಲೀಕರಾದ ಕಾಳಾವರ ಶ್ರೀ ಭಾಸ್ಕರ್ ಶೆಟ್ಟಿ ದಂಪತಿಗಳಿಗೆ ಹಾಗೂ ದೀಪದ ಎಣ್ಣೆಯ ವ್ಯವಸ್ಥೆಯನ್ನು ನೀಡುತ್ತಿರುವ ಶ್ರೀ ಕರುಣಾಕರ ಶೆಟ್ಟಿ ದಂಪತಿಗಳಿಗೆ ತುಂಬು ಹೃದಯದ ಧನ್ಯವಾದಗಳು.

**ಕಾರ್ಯಕ್ರಮಕ್ಕೆ ದೇಣಿಗೆ ನೀಡಿದ ದಾನಿಗಳ ವಿವರ:**

1. ಶ್ರೀಮತಿ ಸುಜಯಾ ಜಯಪ್ರಸಾದ್ ಶೆಟ್ಟಿ
2. ಶ್ರೀಮತಿ ಸರ್ವಾಣಿ ಜಿ. ರೈ
3. ಶ್ರೀ ಮಧುಕರ ಎಂ. ಶೆಟ್ಟಿ, ಗೌರವ ಕಾರ್ಯದರ್ಶಿ
4. ಶ್ರೀ ದೀಪಕ್ ಶೆಟ್ಟಿ, ಖಜಾಂಚಿ
5. ಶೀಲಾ ಎಕ್ವಿಪ್‌ಮೆಂಟ್ಸ್ ಪ್ರೈ. ಲಿ.
6. ಶ್ರೀ ಮೋಹನ್ ಶೆಟ್ಟಿ (ಪೋರ್ಟ್ ಆಫ್ ಪೆವಿಲಿಯನ್ ಬಾರ್ & ರೆಸ್ಟೋರೆಂಟ್)
7. ಶ್ರೀ ರತ್ನಾಕರ ಶೆಟ್ಟಿ ಕಟ್ಕೇರೆ, ಮಾಜಿ ಕಾರ್ಯಕಾರಿ ಸಮಿತಿ ಸದಸ್ಯರು
8. ಶ್ರೀ ಆನಂದರಾಮ ಶೆಟ್ಟಿ, ಮಾಜಿ ಖಜಾಂಚಿ
9. ಶ್ರೀ ಸಂತೋಷ್ (ಹೋಟೇಲ್ ಕ್ಲಾಸಿಕ್ ಕಂಫರ್ಟ್)
10. ಡಾ. ವೈ ಉಮಾನಾಥ ಶೆಟ್ಟಿ, ಕಾರ್ಯಕಾರಿ ಸಮಿತಿ ಸದಸ್ಯರು
11. ಶ್ರೀ ಸುಭಾಷ್ ಶೆಟ್ಟಿ ಕೆ.ಎ.
12. ಶ್ರೀಮತಿ ತಾರಾಮಣಿ ಹೆಗ್ಡೆ, ಕಾರ್ಯಕಾರಿ ಸಮಿತಿ ಸದಸ್ಯರು
13. ಶ್ರೀ ಪ್ರಮೋದ್ ರೆಡ್ಡಿ ಹೋಟೆಲ್ ಸ್ಕೈ ಹೆವೆನ್
14. ಶ್ರೀ ಅಮರನಾಥ್ ಶೆಟ್ಟಿ, ಮಾಜಿ ಕಾರ್ಯಕಾರಿ ಸಮಿತಿ ಸದಸ್ಯರು
15. ಶ್ರೀ ರಮಿತ್ ಬಿ. ಶೆಟ್ಟಿ, ಕಾರ್ಯಕಾರಿ ಸಮಿತಿ ಸದಸ್ಯರು
16. ಶ್ರೀ ಬಾಲಾಜಿ ಸೂಡ
17. ಶ್ರೀ ಜಯರಾಜ್ ಶೆಟ್ಟಿ, ರಾಜಾಧಾನಿ ಹೋಟೆಲ್

ಈ ದೇವತಾ ಕಾರ್ಯಕ್ರಮಕ್ಕೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲಾ ಭಕ್ತಾದಿಗಳಿಗೂ ಪ್ರಾರ್ಥನಾ ಮಂದಿರ ಸಮಿತಿಯ ಪರವಾಗಿ ವಂದನೆಗಳು.

**ಶ್ರೀ ಉಮೇಶ್ ಕುಮಾರ್ ಶೆಟ್ಟಿ**
ಸಂಚಾಲಕರು ಪ್ರಾರ್ಥನಾ ಮಂದಿರ ಸಮಿತಿ

**ಶ್ರೀ ರಾಜೇಶ್ ಶೆಟ್ಟಿ ಕುತ್ಯಾರು**
ಚೇರ್‌ಪರ್ಸನ್, ಪ್ರಾರ್ಥನಾ ಮಂದಿರ ಸಮಿತಿ

# ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ಕ್ರೀಡಾ ಮತ್ತು ಸಾಂಸ್ಕೃತಿಕ ದಿನಾಚರಣೆಯ ವರದಿ

ಜನವರಿ ತಿಂಗಳ 26ನೇ ತಾರೀಖು ನಮ್ಮ ದೇಶದ ಗಣರಾಜ್ಯೋತ್ಸವದ ಸುದಿನ. ಅಂದು ನಮ್ಮ ಸಂಘದ ಸ್ಥಾಪಕರ ದಿನಾಚರಣೆ. ಇದರ ಅಂಗವಾಗಿ ಸಂಘದಲ್ಲಿ ರಾಧಾಬಾಯಿ ತಿಮ್ಮಪ್ಪ ಭಂಡಾರಿ ವಾರ್ಷಿಕ ಕ್ರೀಡಾ ಮತ್ತು ಸಾಂಸ್ಕೃತಿಕ ದಿನಾಚರಣೆಯ ಸಡಗರ. ಸಂಜೆ 3 ಗಂಟೆಗೆ ಸರಿಯಾಗಿ ಸುಶ್ರಾವ್ಯ ಪ್ರಾರ್ಥನೆಯೊಂದಿಗೆ ಆರಂಭವಾದ ಈ ಕಾರ್ಯಕ್ರಮದಲ್ಲಿ 2019–20 ನೇ ಸಾಲಿನ ಕ್ರೀಡಾ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನಗಳನ್ನು ಮತ್ತು ಕ್ರೀಡೆಗಳಲ್ಲಿ ಸಾಧನೆ ಮಾಡಿದವರಿಗೆ ಸಾಧನಾ ಪ್ರಶಸ್ತಿಗಳನ್ನು ವಿತರಿಸಲಾಯಿತು. ಹಾಗೆಯೇ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಅತಿಥಿಗಳು ಬಹುಮಾನಗಳನ್ನು ವಿತರಿಸಿದರು. ಈ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಅಂತರರಾಷ್ಟ್ರೀಯ ರ್‍ಯಾಲಿ ಚಾಂಪಿಯನ್, ಹಾಗೂ ಪ್ರಖ್ಯಾತ ಕ್ರೀಡಾಪಟು ಶ್ರೀ ಅಶ್ವಿನ್ ನಾಯಕ್‌ರವರು ಭಾಗವಹಿಸಿದರು.

ಶ್ರೀ ಅಶ್ವಿನ್ ನಾಯಕ್‌ರವರು ಬೆಂಗಳೂರು ಬಂಟರ ಸಂಘದ ಕ್ರೀಡಾ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ಶ್ಲಾಘಿಸಿ ಮಾತನಾಡಿದರಲ್ಲದೇ ಸ್ಪರ್ಧೆಗಳಲ್ಲಿನ ವಿಜೇತರನ್ನು ಹಾಗೂ ಸ್ಪರ್ಧಿಗಳನ್ನು ಪ್ರೇರೇಪಿಸಿದರು.

ವಿದ್ಯಾರ್ಥಿವೇತನ ಮತ್ತು ಪ್ರಶಸ್ತಿ ಸಮಿತಿಯ ವತಿಯಿಂದ ವಿವಿಧ ಕ್ಷೇತ್ರಗಳ ಪ್ರತಿಭಾನ್ವಿತರಿಗೆ ದತ್ತಿನಿಧಿ ಪ್ರಶಸ್ತಿಗಳನ್ನು ಹಾಗೂ ಸಾಧನಾ ಪ್ರಶಸ್ತಿಗಳಿಗೆ ಭಾಜನರಾದವರನ್ನು ನಗದು ಹಾಗೂ ಫಲಕವನ್ನು ನೀಡಿ ಗಣ್ಯರು ಪುರಸ್ಕರಿಸಿದರು.

ಈ ಕಾರ್ಯಕ್ರಮದಲ್ಲಿ ಕ್ರೀಡಾ ಸಮಿತಿ ಚೇರ್‌ಮೆನ್ ಶ್ರೀ ರಾಧಾಕೃಷ್ಣ ಶೆಟ್ಟಿ, ಸಾಂಸ್ಕೃತಿಕ ಸಮಿತಿ ಚೇರ್‌ಮೆನ್ ಶ್ರೀ ವಿಜಯ ಶೆಟ್ಟಿ ಹಾಲಾಡಿ ಹಾಗೂ ವಿದ್ಯಾರ್ಥಿ ವೇತನ ಮತ್ತು ದತ್ತುನಿಧಿ ಪ್ರಶಸ್ತಿ ಸಮಿತಿಯ ಚೇರ್‌ಮೆನ್ ಶ್ರೀ ಪ್ರವೀಣ್‌ಚಂದ್ರ ಶೆಟ್ಟಿಯವರು ಉಪಸ್ಥಿತರಿದ್ದರು.

ಇದಾದ ನಂತರದ ಸಭೆಯ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ರಾಜೀವ ಗಾಂಧಿ ಆರೋಗ್ಯ ವಿಶ್ವವಿದ್ಯಾನಿಲಯದ ವಿಶ್ರಾಂತ ಉಪಕುಲಪತಿಗಳಾದ ಪ್ರೊ. ಡಾ. ಎಸ್ ರಮಾನಂದ ಶೆಟ್ಟಿಯವರು ಹಾಗೂ ಗೌರವ ಅತಿಥಿಗಳಾಗಿ ಕಲಬುರ್ಗಿ ಕರ್ನಾಟಕ ಕೇಂದ್ರಿಯ ವಿಶ್ವವಿದ್ಯಾನಿಲಯದ ಕುಲಪತಿಗಳು ಮತ್ತು ಬೆಂಗಳೂರು ವಿಶ್ವವಿದ್ಯಾನಿಲಯದ ವಿಶ್ರಾಂತ ಕುಲಪತಿಗಳಾದ ಪ್ರೊ. ಡಾ. ಎನ್.ಆರ್. ಶೆಟ್ಟಿಯವರು ಹಾಗೂ ಕರ್ನಾಟಕ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಾಗಿದ್ದ, ಪ್ರಸ್ತುತ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ (KSDL) ಇದರ ವ್ಯವಸ್ಥಾಪಕ ನಿರ್ದೇಶಕರಾಗಿರುವ ಶ್ರೀ ವಿಜಯ ಕುಮಾರ್ ಶೆಟ್ಟಿ, IFS ಇವರು ಭಾಗವಹಿಸಿದ್ದರು.

ಇದೇ ಸಂದರ್ಭದಲ್ಲಿ ಪ್ರೊ. ಡಾ. ಎನ್. ಆರ್. ಶೆಟ್ಟಿಯವರಿಗೆ ದಿ. ಶ್ರೀ ಕೆ.ಪಿ. ರಾಮಣ್ಣ ಶೆಟ್ಟಿ ಸ್ಮಾರಕ ಶೈಕ್ಷಣಿಕ ಸಾಧಕ ಪ್ರಶಸ್ತಿ, ಹಾಗೂ ಶ್ರೀ ವಿಜಯ್ ಕುಮಾರ್ ಶೆಟ್ಟಿ, IFS ಇವರಿಗೆ ದಿ. ಡಾ. ಮಧುಕರ ಶೆಟ್ಟಿ, ಐ.ಪಿ.ಎಸ್, ಸ್ಮಾರಕ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ಪ್ರೊ. ಡಾ. ಎನ್. ಆರ್ ಶೆಟ್ಟಿಯವರು ಪ್ರಶಸ್ತಿ ಸ್ವೀಕರಿಸಿ ಮಾತನಾಡಿ ಬೆಂಗಳೂರು ಬಂಟರ ಸಂಘದ ಕಾರ್ಯಚಟುವಟಿಕೆಗಳನ್ನು ಶ್ಲಾಘಿಸಿದರು.

ಶ್ರೀ ವಿಜಯ ಕುಮಾರ್ ಶೆಟ್ಟಿ, IFS ರವರು ಪ್ರಶಸ್ತಿ ಸ್ವೀಕರಿಸಿ ಮಾತನಾಡಿ ಅವರು ನಡೆದು ಬಂದ ದಾರಿಯನ್ನು ಉದಾಹರಣೆಯಾಗಿ ನೀಡಿ, ಬಂಟ ಸಮಾಜದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಭಾಗವಹಿಸುವವರ ಸಂಖ್ಯೆ ಜಾಸ್ತಿಯಾಗಬೇಕು ಮತ್ತು ಕರ್ನಾಟಕ ಹಾಗೂ ಭಾರತೀಯ ನಾಗರಿಕ ಸೇವೆಯಲ್ಲಿ ತೊಡಗಿಸಿಕೊಳ್ಳಬೇಕೆಂದು ಹೇಳಿದರು.

ಮುಖ್ಯ ಅತಿಥಿ ಪ್ರೊ. ಡಾ. ಎಸ್. ರಮಾನಂದ ಶೆಟ್ಟಿಯವರು ಮಾತನಾಡಿ ಪ್ರೊ. ಡಾ. ಎನ್. ಆರ್. ಶೆಟ್ಟಿಯವರಿಗೆ ಪ್ರಶಸ್ತಿ ಪ್ರದಾನ ಮಾಡಿದ್ದನ್ನು ಶ್ಲಾಘಿಸಿ ಅವರ ವಿಶೇಷ ಗುಣಗಾನ ಮಾಡಿದರಲ್ಲದೇ, ಶಿಕ್ಷಣದ ಬಗೆಗಿನ ಹೆಚ್ಚಿನ ಮಾಹಿತಿಗಳನ್ನು ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷರಾದ ಶ್ರೀ ಆರ್. ಉಪೇಂದ್ರ ಶೆಟ್ಟಿಯವರು ವಹಿಸಿದರು. ಸಂಘದ ಗೌರವ ಕಾರ್ಯದರ್ಶಿ ಶ್ರೀ ಮಧುಕರ ಎಂ. ಶೆಟ್ಟಿಯವರು ಕಾರ್ಯಕ್ರಮಕ್ಕೆ ಆಗಮಿಸಿದ ಎಲ್ಲಾ ಅತಿಥಿ ಅಭ್ಯಾಗತರನ್ನು ಆತ್ಮೀಯವಾಗಿ ಸ್ವಾಗತಿಸಿದರು. ಜೊತೆ ಕಾರ್ಯದರ್ಶಿ ಶ್ರೀಮತಿ ಸೌಮ್ಯಪ್ರಿಯ ಹೆಗ್ಡೆಯವರ ಧನ್ಯವಾದ ಸಮರ್ಪಣೆ-ಯೊಂದಿಗೆ ಸಭಾ ಕಾರ್ಯಕ್ರಮವು ಮುಕ್ತಾಯವಾಯಿತು.

ಸಭಾಕಾರ್ಯಕ್ರಮದ ಮೊದಲು ಹಾಗೂ ನಂತರ ನಡೆದ ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ವಿಜೇತ ಪ್ರತಿಭೆಗಳಿಂದ ವಿವಿಧ ನೃತ್ಯ ಪ್ರದರ್ಶನ ಜನಮನ ಸೂರೆಗೊಂಡಿತು. ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸ್ಮಾರಕ ಸಾಂಸ್ಕೃತಿಕ ದಿನಾಚರಣೆಯ ಅಂಗವಾಗಿ ಸಾಂಸ್ಕೃತಿಕ ಸಮಿತಿ ಆಯೋಜಿಸಿದ್ದ ಕಾರ್ಯಕ್ರಮಗಳು ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರವಾಯಿತು. ಕುಮಾರಿ ಸ್ವಸ್ತಿಕ ಶೆಟ್ಟಿ ಹಾಗೂ ಅಜಿತ್ ಶೆಟ್ಟಿಯವರು ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರೂಪಿಸಿದರು. ಸದಸ್ಯ ಬಾಂಧವರಿಗೆ ಹಾಗೂ ಅತಿಥಿಗಳಿಗೆ ಶುಚಿ-ರುಚಿಯಾದ ಸಹಭೋಜನ ಏರ್ಪಡಿಸಲಾಗಿತ್ತು.

# *Congratulations*




**Dr. Harini P. Shetty** MBBS, DGO, Fellowship in Fetal Medicine, has successfully completed with distinction, by obtaining 1st rank in the recently held examination of Indian Medical Association (IMA) - AMS Fellowship in Infertility - 2019-2020.

Dr. Harini P. Shetty is currently working as a senior consultant in OVUM, Women & Child Speciality Hospital, Bangalore. She is the daughter of Modalthav Sri K. R. Shetty and Smt. B.S. Saraswathi R. Shetty. Dr. Harini is wife of Dr. Praveen V. Shetty, S/o Smt. & Sri H. Vasanth Shetty, Rtd. GM, Vijaya Bank.

On behalf of all the members of the Sangha, Bunts Sangha Bangalore wishes her all the very best for her future endeavors.

# ರಂಗತರಬೇತಿ ಮತ್ತು ಯಕ್ಷಗಾನ ಸಮಿತಿ




ಬಂಟರ ಸಂಘ ಬೆಂಗಳೂರು ಇದರ ರಂಗತರಬೇತಿ ಮತ್ತು ಯಕ್ಷಗಾನ ಸಮಿತಿಯ ವತಿಯಿಂದ ಸಂಘದ ಅಧಿದೇವತೆ ಶ್ರೀ ವರಸಿದ್ಧಿ ವಿನಾಯಕ ಪ್ರಾರ್ಥನಾ ಮಂದಿರದ ವಾರ್ಷಿಕೋತ್ಸವದ ಪ್ರಯುಕ್ತ ದಿನಾಂಕ 19.01.2020ರಂದು 'ಯಕ್ಷತೋರಣ–2' ಕಾರ್ಯಕ್ರಮವನ್ನು ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಪ್ರಾರ್ಥನಾ ಸಮಿತಿಯ ವತಿಯಿಂದ ನಡೆದ ಪೂಜಾ ಕಾರ್ಯಕ್ರಮಗಳ ತರುವಾಯ ಸಂಪ್ರದಾಯದಂತೆ ಕಲಾ ಸೇವೆಯ ಅಂಗವಾಗಿ ಯಕ್ಷಗಾನವನ್ನು ಪ್ರದರ್ಶಿಸಲಾಯಿತು. ಸಂಘದ ಯಕ್ಷಗಾನ ತರಬೇತಿ ಕೇಂದ್ರದ ವಿದ್ಯಾರ್ಥಿಗಳಿಂದ ಪ್ರದರ್ಶಿಸಲ್ಪಟ್ಟ 'ಸೀತಾ ವಿಯೋಗ, ಕುಶ–ಲವ' ಪ್ರಸಂಗವು ಅತ್ಯುತ್ತಮವಾಗಿ ಮೂಡಿಬಂದು ಸಭಿಕರೆಲ್ಲರ ಪ್ರಶಂಸೆಗೆ ಪಾತ್ರವಾಯಿತು. ನಂತರ ಸಂಘದ ಮಹಿಳಾ ಕಲಾವಿದೆಯರು ಅಭಿನಯಿಸಿದ 'ಯಕ್ಷ ನೃತ್ಯರೂಪಕ' ಕಲಾಸಕ್ತರನ್ನು ಮುದಗೊಳಿಸಿತು. ಕೊನೆಯದಾಗಿ ಸಂಘದ ಸದಸ್ಯರು ಹಾಗೂ ಖ್ಯಾತ ಅತಿಥಿ ಕಲಾವಿದರ ಕೂಡುವಿಕೆಯಲ್ಲಿ ಜರುಗಿದ 'ಬಭ್ರುವಾಹನ ಕಾಳಗ' ಸಭಿಕರಿಗೆ ಯಕ್ಷಕಲೆಯ ಸವಿಯನ್ನು ಉಣಬಡಿಸಿತು.

ಯಕ್ಷಗಾನ ಕಾರ್ಯಕ್ರಮದ ಮುನ್ನ ನಡೆದ ಸಭಾ ಕಾರ್ಯಕ್ರಮದಲ್ಲಿ ಸಂಘದ ಮಾಜಿ ಅಧ್ಯಕ್ಷರಾದ ಶ್ರೀ ಹರೀಶ್ ಕುಮಾರ್ ಶೆಟ್ಟಿಯವರು ಮುಖ್ಯ ಅತಿಥಿಯಾಗಿ ಭಾಗವಹಿಸಿದ್ದರು. ಪ್ರಾರ್ಥನಾ ಸಮಿತಿಯ ಈ ಸುಂದರ ಕಾರ್ಯಕ್ರಮವನ್ನು ನಡೆಸಿಕೊಟ್ಟ ಅಧ್ಯಕ್ಷರಾದ ಶ್ರೀ ರಾಜೇಶ್ ಶೆಟ್ಟಿ ಕುತ್ಯಾರು ಮತ್ತು ಶ್ರೀಮತಿ ಕೋಮಲ ದಂಪತಿ ಮತ್ತು ರಂಗ ತರಬೇತಿ ಮತ್ತು ಯಕ್ಷಗಾನ ಸಮಿತಿಯ ಅಧ್ಯಕ್ಷರಾದ ಶ್ರೀ ಗುರುಪ್ರಸಾದ್ ಹೆಗ್ಡೆ ಮತ್ತು ಶ್ರೀಮತಿ ಜಯಶ್ರೀ ಹೆಗ್ಡೆ ದಂಪತಿಗಳನ್ನು ಸಂಘದ ಅಧ್ಯಕ್ಷರಾದ ಶ್ರೀ ಆರ್. ಉಪೇಂದ್ರ ಶೆಟ್ಟಿ ಮತ್ತು ಗೌರವ ಕಾರ್ಯದರ್ಶಿ ಶ್ರೀ ಮಧುಕರ ಎಂ. ಶೆಟ್ಟಿಯವರ ಸಮ್ಮುಖದಲ್ಲಿ ಪ್ರೀತ್ಯಾದರಗಳಿಂದ ಸತ್ಕರಿಸಲಾಯಿತು. ಅತ್ಯಧಿಕ ಸಂಖ್ಯೆಯಲ್ಲಿ ನೆರೆದಿದ್ದ ಭಕ್ತ ಜನರು ಪೂಜೆ ಹಾಗೂ ಸಾಮೂಹಿಕ ಭೋಜನ ಕಾರ್ಯಕ್ರಮದಲ್ಲಿ ಭಾಗವಹಿಸಿ ಶ್ರೀ ದೇವರ ಕೃಪೆಗೆ ಪಾತ್ರರಾದರು. ದಿನಾಂಕ 31.03.2019 ರಂದು ನಡೆದ ಯಕ್ಷ ತೋರಣ ಕಾರ್ಯಕ್ರಮಕ್ಕೆ ದೇಣಿಕೆ ಮತ್ತು ಪ್ರಾಯೋಜಕತ್ವ ನೀಡಿದ ಎಲ್ಲಾ ಸಹೃದಯಿ ಬಾಂಧವರಿಗೆ ಈ ಸಂದರ್ಭದಲ್ಲಿ ಮತ್ತೊಮ್ಮೆ ಶ್ರೀ ಗುರುಪ್ರಸಾದ್ ಹೆಗ್ಡೆಯವರು ಕೃತಜ್ಞತೆ ಸಲ್ಲಿಸಿದರು.

**ಸಂತೋಷ್ ಕುಮಾರ್ ಶೆಟ್ಟಿ, ಮೂಡುಬಗೆ**
ಸಂಚಾಲಕರು
ರಂಗತರಬೇತಿ ಮತ್ತು ಯಕ್ಷಗಾನ ಸಮಿತಿ

**ಗುರುಪ್ರಸಾದ್ ಎನ್. ಹೆಗ್ಡೆ**
ಅಧ್ಯಕ್ಷರು
ರಂಗತರಬೇತಿ ಮತ್ತು ಯಕ್ಷಗಾನ ಸಮಿತಿ

# ಗುರುಪುರ ಬಂಟ "ಕಲಾವೀಳ್ಯ–2020"ರಲ್ಲಿ ಪ್ರಥಮ ಸ್ಥಾನ ಗಳಿಸಿದ ಬಂಟರ ಸಂಘ ಬೆಂಗಳೂರು




ಗುರುಪುರ ಬಂಟರ ಮಾತೃ ಸಂಘದ ಆಶ್ರಯದಲ್ಲಿ ನಡೆದ "ಬಂಟ ಕಲಾವೀಳ್ಯ– 2020" – ರಾಷ್ಟ್ರ ಮಟ್ಟದ ಅಂತರ್ ಬಂಟರ ಸಂಘ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಭಾಗವಹಿಸಿದ ಬಂಟರ ಸಂಘ ಬೆಂಗಳೂರು – ಸಾಂಸ್ಕೃತಿಕ ಸಮಿತಿಯ ನೇತೃತ್ವದ ತಂಡ ಪ್ರಥಮ ಸ್ಥಾನವನ್ನು ಪಡೆದುಕೊಂಡಿತು. ಅಲ್ಲದೆ ಅತ್ಯುತ್ತಮ ಪ್ರಹಸನ ಪ್ರಶಸ್ತಿ ಕೂಡ ಗೆದ್ದುಕೊಂಡಿತು.

"ಭಗತ್ ಸಿಂಗ್ ಕಂಡಂತೆ ಭಾರತ" ಎನ್ನುವ ವಿಷಯಾಧಾರಿತ ಕಾರ್ಯಕ್ರಮ ಪ್ರಸ್ತುತ ಪಡಿಸಿದ ನಮ್ಮ ತಂಡ, ಅಭಿನಯ, ರಂಗವಿನ್ಯಾಸ, ನೃತ್ಯ, ಹಾಡು ಎಲ್ಲಾ ವಿಭಾಗಗಳಲ್ಲೂ ಎಲ್ಲರ ಮೆಚ್ಚುಗೆಗೆ ಪಾತ್ರವಾಯಿತು. ಶ್ರೀ ಸದಾಶಿವ ರೈ ನೀನಾಸಂ ನಿರ್ದೇಶನದಲ್ಲಿ ಕಾರ್ಯಕ್ರಮ ಮೂಡಿಬಂದಿತು. ಸೃಜನ್ ಶೇಖ ನಿರ್ದೇಶನದಲ್ಲಿ ನೃತ್ಯ, ಸಂತೋಷ್ ಹೆಗ್ಡೆ ನೇತ್ರತ್ವದಲ್ಲಿ ಹಾಡು ಮೂಡಿಬಂದಿತು. ಶ್ರೀ ವಿಜಯ್ ಜೆ. ಶೆಟ್ಟಿ ಹಾಲಾಡಿ ಸಾರಥ್ಯದಲ್ಲಿ, ಶ್ರೀ ಪ್ರಸಾದ್ ಶೆಟ್ಟಿ ಮತ್ತು ತಂಡ ಸಮಗ್ರ ಪ್ರಶಸ್ತಿಯನ್ನು ಬಾಚಿಕೊಂಡಿತು.

ಸಂಘದ ಅಧ್ಯಕ್ಷರಾದ ಶ್ರೀ ಆರ್. ಉಪೇಂದ್ರ ಶೆಟ್ಟಿ, ಖಜಾಂಚಿ ಶ್ರೀ ದೀಪಕ್ ಶೆಟ್ಟಿ, ಜತೆ ಕಾರ್ಯದರ್ಶಿ ಶ್ರೀಮತಿ ಸೌಮ್ಯಪ್ರಿಯ ಹೆಗ್ಡೆ, ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀಮತಿ ಕಲಾವತಿ ಬಿ. ಶೆಟ್ಟಿ, ಶ್ರೀಮತಿ ಜಯಶ್ರೀ ಸಿ. ರೈ ಮುಂತಾದವರು ಉಪಸ್ಥಿತರಿದ್ದರು.

ನಮ್ಮ ಗೆಲುವಿಗೆ ಸಹಕರಿಸಿದ ಎಲ್ಲರಿಗೂ ವಂದನೆಗಳು

**ವಿಜಯ್ ಜೆ. ಶೆಟ್ಟಿ ಹಾಲಾಡಿ**
ಛೇರ್ ಪರ್ಸನ್ ಸಾಂಸ್ಕ್ರತಿಕ ಸಮಿತಿ

# RTB Auditorium Booking Status as on 14.02.2020

| Sl. No. | Date | Name of the Party | Booking Category Member / Non Member | No. of Days |
|---|---|---|---|---|
| 1 | 13.02.2020 & 14.02.2020 | Shashidhar C. | Non member | 2 |
| 2 | 15.02.2020 | Bhaskar Shetty | Member | 1 |
| 3 | 16.02.2020 | Bore Gowda | Non member | 1 |
| 4 | 17.02.2020 | Krishna Nayak | Non member | 1 |
| 5 | 19.02.2020 | Naveen Kumar T. | Non member | 1 |
| 6 | 20.02.2020 | Sudhakar Shetty | Member | 1 |
| 7 | 21.02.2020 | Vidya Sagar Public Eng. School | Non member | 1 |
| 8 | 22.02.2020 | Kumaraswamy | Non member | 1 |
| 9 | 23.02.2020 | B. Ravishankar | Non member | 1 |
| 10 | 24.02.2020 | Vijayanagar College of Nursing | Non member | 1 |
| 11 | 25.02.2020 & 26.02.2020 | Basavaraju BG | Non member | 2 |
| 12 | 27.02.2020 & 28.02.2020 | Revanasiddappa | Non member | 2 |
| 13 | 29.02.2020 | Santhosh Kumar Hegde | Member | 1 |
| 14 | 01.03.2020 | Mayanna Gowda M. | Non member | 1 |
| 15 | 03.03.2020 | Sarvodhaya College of Nursing | Non member | 1 |
| 16 | 04.03.2020 & 05.03.2020 | N. Suresh Kumar | Non member | 2 |
| 17 | 06.03.2020 & 07.03.2020 | KSCAA | Non member | 2 |
| 18 | 08.03.2020 | Sri Nithin S. | Non member | 1 |
| 19 | 09.03.2020 | Krishna Nayak M. | Non member | 1 |
| 20 | 10.03.2020 | Girish Audio Visuals | Non member | 1 |
| 21 | 11.03.2020& 12.03.2020 | A. Lingamurthy | Non member | 2 |
| 22 | 13.03.2020 | Shivaram Shetty M. | Member | 1 |
| 23 | 15.03.2020 | Girish Audio Visuals | Non member | 1 |
| 24 | 16.03.2020 | Chandrakala | Non member | 1 |
| 25 | 17.03.2020 | Bhaskar Nayak C. | Non member | 1 |
| 26 | 18.03.2020 & 19.03.2020 | M. Sreekantaiah | Non member | 2 |
| 27 | 20.03.2020 | K. Diwakar | Non member | 1 |
| 28 | 21.03.2020 | KSSIA | Non member | 1 |
| 29 | 22.03.2020 | Suprith R. Gowda | Non member | 1 |
| 30 | 05.04.2020 | K.B. Rajanna & Nagarathna | Non member | 1 |

| | | | | |
|---|---|---|---|---|
| 31 | 09.04.2020 | B.B. Shetty | Member | 1 |
| 32 | 11.04.2020 | Girish Audio Visuals | Non member | 1 |
| 33 | 12.04.2020 | Varsha Gayathri | Non member | 1 |
| 34 | 13.04.2020 | Krishna Nayak M. | Non member | 1 |
| 35 | 17.04.2020 | Bhaskar Nayak C. | Non member | 1 |
| 36 | 18.04.2020 | Chandrakala | Non member | 1 |
| 37 | 19.04.2020 | Lions Club | Non member | 1 |
| 38 | 26.04.2020 | Surendra Shetty M. | Member | 1 |
| 39 | 29.04.2020 & 30.04.2020 | M. K. Devegowda | Non member | 2 |
| 40 | 01.05.2020 | K. Shobha | Non member | 1 |
| 41 | 02.05.2020 & 03.05.2020 | Chandrappa | Non member | 2 |
| 42 | 06.05.2020 | Venugopal B. | Non member | 1 |
| 43 | 08.05.2020 | S.L Srinivas | Non member | 1 |
| 44 | 09.05.2020 & 10.05.2020 | Byregowda G. | Non member | 2 |
| 45 | 11.05.2020 | Krishna Nayak M | Non member | 1 |
| 46 | 12.05.2020 | K.S. Prakash | Non member | 1 |
| 47 | 13.05.2020 | Shankar Shetty | Member | 1 |
| 48 | 15.05.2020 | Bhaskar Nayak C. | Non member | 1 |
| 49 | 16.05.2020 & 17.05.2020 | Parthasarathi B.G. | Non member | 2 |
| 50 | 18.05.2020 | Chandrakala | Non member | 1 |
| 51 | 20.05.2020 | Bharath Kumar C. | Non member | 1 |
| 52 | 23.05.2020 & 24.05.2020 | A. Shanmugam | Non member | 2 |
| 53 | 31.05.2020 & 01.06.2020 | B. Ramachandra | Non member | 2 |
| 54 | 06.06.2020 & 07.06.2020 | Raghupathi Y.N. | Non member | 2 |
| 55 | 10.06.2020 | M.G. Ravikumar | Non member | 1 |
| 56 | 12.06.2020 | Karunakara Udupi | Non member | 1 |
| 57 | 19.06.2020 | Bhaskar Nayak C. | Non member | 1 |
| 58 | 20.06.2020 | Krishna Nayak M. | Non member | 1 |
| 59 | 21.06.2020 | Chandrakala | Non member | 1 |
| 60 | 28.06.2020 | Suddi Mahithi Trust | Non member | 1 |
| 61 | 01.07.2020 | B. Ramachandra | Non member | 1 |
| 62 | 12.07.2020 | Bhaskar Nayak C. | Non member | 1 |
| 63 | 29.11.2020 | Manjula B.C. | Non member | 1 |
| 64 | 06.12.2020 | Padmavathi A. Shetty | Member | 1 |

# ಹುಬ್ಬಳ್ಳಿ–ಧಾರವಾಡ ಬಂಟರ ಸಂಘದ ವಾರ್ಷಿಕ ಸ್ನೇಹಕೂಟ



'ಆರ್ಥಿಕವಾಗಿ ಸಬಲರಿದ್ದವರು, ಅವಶ್ಯಕತೆ ಇದ್ದವರಿಗೆ ಸಹಾಯಹಸ್ತ ಚಾಚುವ ಮೂಲಕ ಸಮಾಜದ ಸಮಗ್ರ ಅಭಿವೃದ್ಧಿಗೆ ಕೈ ಜೋಡಿಸಬೇಕು' ಎಂದು ಉದ್ಯಮಿ ಎಂ. ಮುರಲೀಧರ ಹೆಗ್ಡೆ ಹೇಳಿದರು. ಇಲ್ಲಿಯ ಆರ್.ಎನ್. ಶೆಟ್ಟಿ ಕಲ್ಯಾಣ ಮಂಟಪದಲ್ಲಿ ಭಾನುವಾರ ನಡೆದ ಹುಬ್ಬಳ್ಳಿ–ಧಾರವಾಡ ಬಂಟರ ಸಂಘದ ವಾರ್ಷಿಕ ಸ್ನೇಹಕೂಟದಲ್ಲಿ ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದರು.

ಪ್ರಸ್ತುತ ಸಮಾಜದಲ್ಲಿ ಎಲ್ಲ ರೀತಿಯ ಸೌಕರ್ಯ ಇದ್ದವರು ಬಹಳ ಜನ ಇದ್ದಾರೆ. ಆದರೆ ಕೊಡುಗೈ ದಾನಿಗಳ ಸಂಖ್ಯೆ ಕಡಿಮೆ. ಆದರೆ ಬಂಟರ ಸಮುದಾಯ ಇಲ್ಲದವರಿಗೆ ಕೊಟ್ಟು ಮುನ್ನಡೆಸುವ ಮನೋಭಾವ ಹೊಂದಿದೆ ಎಂದರು.

ಇನ್ನೋರ್ವ ಮುಖ್ಯ ಅತಿಥಿ, ಪತ್ರಕರ್ತ ಜಯಪ್ರಕಾಶ ಶೆಟ್ಟಿ ಮಾತನಾಡಿ, 'ಸಾಧನೆ ಎಂಬುದು ಎಲ್ಲರ ಮಾತಾಗಬೇಕು. ಆದರೆ ಮಾತುಗಳೇ ಸಾಧನೆ ಆಗಬಾರದು. ಸಮಾಜದ ಮಕ್ಕಳಲ್ಲಿ ಇರುವ ಸುಪ್ತ ಪ್ರತಿಭೆ ಗುರುತಿಸುವ ಕೆಲಸ ಆಗಬೇಕು. ಅಲ್ಲದೇ, ಅರ್ಹ ವಿದ್ಯಾರ್ಥಿಗಳಿಗೆ ನೆರವು ನೀಡಿ ಅವರ ಉಜ್ವಲ ಭವಿಷ್ಯಕ್ಕೆ ಸಮಾಜ ಸಾಕ್ಷಿಯಾಗಬೇಕು' ಎಂದರು.

ಇದೇ ಸಂದರ್ಭದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಕ ಧನ ವಿತರಿಸಲಾಯಿತು. 'ಬಂಟರ ಧ್ವನಿ' ಪುಸ್ತಕ ಬಿಡುಗಡೆಗೊಂಡಿತು. ನಂತರ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು. ಸಂಘದ ಕಾರ್ಯಾಧ್ಯಕ್ಷರಾದ ಶ್ರೀ ದಿನೇಶ್ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರುಗಿದ ಸಮಾರಂಭದಲ್ಲಿ ಬೇಳೂರು ಭುಜಂಗ ಶೆಟ್ಟಿ, ಮಂಜುರಾಮ ಶೆಟ್ಟಿ, ಎಸ್.ಪಿ. ಶೆಟ್ಟಿ, ಸತೀಶ್ ಶೆಟ್ಟಿ, ಸಿ.ಬಿ. ಶೆಟ್ಟಿ, ದಿನೇಶ್ ಶೆಟ್ಟಿ, ಸುಧೀರ ಶೆಟ್ಟಿ, ದೀಪಕ್ ಶೆಟ್ಟಿ, ವಿಜಯಾನಂದ ಶೆಟ್ಟಿ, ಮಹೇಶ ಶೆಟ್ಟಿ, ವಿರೇಂದ್ರ ಶೆಟ್ಟಿ ಉಪಸ್ಥಿತರಿದ್ದರು, ದಿನೇಶ್ ಶೆಟ್ಟಿಯವರು ಸ್ವಾಗತಿಸಿದರು, ಕೆ. ಸುರೇಶ್ ಶೆಟ್ಟಿಯವರು ಸಂಘದ ವಾರ್ಷಿಕ ವರದಿ ವಾಚಿಸಿದರು. ಎಸ್. ಸುಭಾಶ್ಚಂದ್ರ ಶೆಟ್ಟಿ, ಕೆ. ಸುಧಾಕರ ಶೆಟ್ಟಿ ಅತಿಥಿಗಳನ್ನು ಪರಿಚಯಿಸಿದರು.

# ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ "ಪ್ರೇರಣಾ ಅಂತರ್ ಶಾಲಾ ಸ್ಪರ್ಧೆ 2019–20"






ಬೆಂಗಳೂರು ದಕ್ಷಿಣ ವಲಯದ ಬಂಟರ ಸಂಘ ಆರ್.ಎನ್.ಎಸ್. ವಿದ್ಯಾನಿಕೇತನ ಸಂಸ್ಥೆಯ 'ಕಬ್ಸ್ ಮತ್ತು ಬುಲ್ ಬುಲ್', 'ಸ್ಕೌಟ್ಸ್ ಮತ್ತು ಗೈಡ್ಸ್' ಆರ್.ಎನ್.ಎಸ್. ಘಟಕದ ದಶಮಾನೋತ್ಸವದ ಪ್ರಯುಕ್ತ 'ಪ್ರೇರಣಾ' ಅಂತರ್ ಶಾಲಾ ಸ್ಪರ್ಧೆಯು ದಿನಾಂಕ 16.12.2019 ರಂದು ಯಶಸ್ವಿಯಾಗಿ ನಡೆಯಿತು. ಈ ಸ್ಪರ್ಧೆಯಲ್ಲಿ ಸುಮಾರು 33 ಶಾಲೆಗಳಿಂದ 450 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಮುಖ್ಯ ಅಥಿತಿಗಳಾಗಿ ಈ ಕಾರ್ಯಕ್ರಮಕ್ಕೆ ಆಗಮಿಸಿದ್ದ ಶ್ರೀ ರಾಜೇಶ್ ಗೌಡ ಐ.ಎ.ಎಸ್, ಬೆಸ್ಕಾಂ ನಿರ್ದೇಶಕರು, ದೀಪ ಪ್ರಜ್ವಲನೆಯೊಂದಿಗೆ ಕಾರ್ಯಕ್ರಮಕ್ಕೆ ವಿಧ್ಯುಕ್ತವಾಗಿ ಚಾಲನೆ ನೀಡಿದರು. ವಿದ್ಯಾರ್ಥಿಗಳಿಗೆ ಸಮಾಜ ಮುಖಿ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ದೇಶ ಸೇವೆಯಲ್ಲಿ ಪಾಲ್ಗೊಳ್ಳುವಂತೆ ಕರೆಯಿತ್ತರು. ಈ ಕಾರ್ಯಕ್ರಮಕ್ಕೆ ಗೌರವ ಅತಿಥಿಗಳಾಗಿ ಆಗಮಿಸಿದ ಬೆಂಗಳೂರು ದಕ್ಷಿಣ ಜಿಲ್ಲಾ ವಿಭಾಗ, ಪದವಿಪೂರ್ವ ಶಿಕ್ಷಣ ಇಲಾಖೆಯ ಉಪನಿರ್ದೇಶಕರಾದ ಶ್ರೀಯುತ ರಾಜ್‌ಕುಮಾರ್ ಬಿ.ಎಂ. ರವರು ವಿದ್ಯಾರ್ಥಿಗಳ ಜೀವನದಲ್ಲಿ 'ಸ್ಕೌಟ್ಸ್ ಮತ್ತು ಗೈಡ್ಸ್'ನ ಮಹತ್ವವನ್ನು ತಿಳಿಸಿದರು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಆರ್. ಉಪೇಂದ್ರ ಶೆಟ್ಟಿ ಬಂಟರ ಸಂಘ, ಬೆಂಗಳೂರು ಇವರು ನಿರ್ವಹಿಸಿದರು. ವಿದ್ಯಾರ್ಥಿಗಳಲ್ಲಿ ಶಿಸ್ತು ಮತ್ತು ತಾಳ್ಮೆಯನ್ನು ಬೆಳೆಸುವಲ್ಲಿ ಈ ಸಂಘಟನೆಗಳು ಪ್ರಮುಖ ಪಾತ್ರ ವಹಿಸುತ್ತವೆ ಎಂಬುದಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. 'ಪ್ರೇರಣಾ' ಅಂತರ್ ಶಾಲಾ ಸ್ಪರ್ಧೆಯಲ್ಲಿ ಪ್ರಬಂಧ, ಚಿತ್ರಕಲೆ, ಸ್ಮರಣ ಶಕ್ತಿ ಪರೀಕ್ಷೆ, ಸಮೂಹ ನೃತ್ಯ, ಕಸದಿಂದ ರಸ, ಇತ್ಯಾದಿ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು.

ಕರ್ನಾಟಕ ರಾಜ್ಯದ ಭಾರತ್ 'ಸ್ಕೌಟ್ಸ್ ಮತ್ತು ಗೈಡ್ಸ್'ನ ಮುಖ್ಯ ಆಯುಕ್ತರಾದ ಶ್ರೀ ಪಿ. ಜಿ. ಆರ್. ಸಿಂಧ್ಯಾರವರು ಸಮಾರೋಪ ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ವಿಜೇತರಿಗೆ ಬಹುಮಾನ ವಿತರಿಸಿ, ವಿದ್ಯಾರ್ಥಿಗಳೊಂದಿಗೆ ತಮ್ಮ ಒಡನಾಟ, ಬಾಂಧವ್ಯ ಹಾಗೂ ಜೀವನದಲ್ಲಿ ಶಿಸ್ತನ್ನು ಅಳವಡಿಸಿಕೊಳ್ಳುವಂತೆ ಸಭಿಕರಿಗೆ ಮನವರಿಕೆ ಮಾಡಿದರು.

ಬಂಟರ ಸಂಘದ ಗೌರವ ಕಾರ್ಯದರ್ಶಿಗಳೂ ಹಾಗೂ ಶಾಲಾ ಸಮಿತಿಯ ಸಂಚಾಲಕರಾದ ಶ್ರೀ ಮಧುಕರ ಎಂ ಶೆಟ್ಟಿಯವರು ಆರ್.ಎನ್.ಎಸ್. ಘಟಕ ಬೆಳೆದು ಬಂದ ಹಾದಿಯನ್ನು ಸಂಕ್ಷಿಪ್ತವಾಗಿ ವಿವರಿಸಿದರು. ಜಿಲ್ಲೆಯ ಆಯುಕ್ತರಾದ ಶ್ರೀ ಪಿ. ಪಳನಿ ಹಾಗೂ ಬೆಂಗಳೂರು ದಕ್ಷಿಣ ವಿಭಾಗದ ಕಾರ್ಯದರ್ಶಿಗಳಾದ ಶ್ರೀ ಸತೀಶ್‌ರವರು ಉಪಸ್ಥಿತರಿದ್ದರು. ಹಾಗೆಯೇ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ಸಿದ್ಧಗಂಗಾ ರವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಆರ್.ಎನ್.ಎಸ್. ವಿದ್ಯಾ ಸಂಸ್ಥೆಯ ಪ್ರಾಂಶುಪಾಲರಾದ ಶ್ರೀಮತಿ ಅಂಜು ಆರ್ ನಾಯಕ್ ಹಾಗೂ ಮುಖ್ಯೋಪಾಧ್ಯಾಯರು, ಎಲ್ಲಾ ಶಿಕ್ಷಕ/ಶಿಕ್ಷಕೇತರ ವೃಂದದವರು ಮತ್ತು ವಿದ್ಯಾರ್ಥಿಗಳ ಸಹಯೋಗದೊಂದಿಗೆ ಕಾರ್ಯಕ್ರಮವು ಸಂಪೂರ್ಣವಾಗಿ ಯಶಸ್ವಿಗೊಂಡಿತು.

# ಪುಣ್ಯ ಚಿರಸ್ಮರಣೆ







## ಶ್ರೀಮತಿ ಇರ್ಮಾಡಿ ಲಲಿತಾ ಬಿ. ಶೆಟ್ಟಿ

**W/o** ದಿ|| ಪಿ.ಎಸ್. ತಿಮ್ಮಪ್ಪ ಶೆಟ್ಟಿ – **Ret. Deputy Collector**

ಜನನ: 24.02.1920 ನಿಧನ: 25.01.2001

ಶ್ರೀಮತಿ ಸುಜಯ ಮತ್ತು ಶ್ರೀ ಜಯಪ್ರಸಾದ್ ಶೆಟ್ಟಿ ಇರ್ಮಾಡಿ (ಸೊಸೆ, ಮಗ)

ಶ್ರೀಮತಿ ಇರ್ಮಾಡಿ ಆಶಾಲತಾ ಗೋಪಿನಾಥ್ (ಮಗಳು)

ಶ್ರೀಮತಿ ಮಾಲತಿ ಮತ್ತು ಡಾ. ವಿಜಯ ಕುಮಾರ್ ಶೆಟ್ಟಿ ಇರ್ಮಾಡಿ (ಸೊಸೆ, ಮಗ)

ಡಾ. ವಿವೇಕ ಮತ್ತು ಡಾ. ಸಂತೋಷ್ ಕುಮಾರ್ ಶೆಟ್ಟಿ ಇರ್ಮಾಡಿ (ಸೊಸೆ, ಮಗ)

ಶ್ರೀಮತಿ ಇರ್ಮಾಡಿ ಪುಷ್ಪಲತಾ ಪಿ.ವಿ ಶೆಟ್ಟಿ (ಮಗಳು)

ಮೊಮ್ಮಕ್ಕಳು, ಮರಿಮಕ್ಕಳು, ಇರ್ಮಾಡಿ ಕುಟುಂಬಿಕರು ಮತ್ತು ಬಂಧು ಬಳಗ

ADVT.

# ಅಭಿನಂದನೆಗಳು



ಬದುಕಿನ ಹಾದಿ ನಡೆದಷ್ಟೂ ವಿಶಾಲವಾಗುತ್ತಲೇ ಹೋಗುತ್ತದೆ, ಸತತ ಪ್ರಯತ್ನಗಳೇ ಗೆಲುವಿನ ಮಾನದಂಡ. ಈ ಮಾತಿಗೆ ತಾಜಾ ಉದಾಹರಣೆಯೇ ಕನ್ನಡದ ಜನಪ್ರಿಯ ಕಿರುತೆರೆ ನಟ ಕುಂದಾಪುರ ಕರಾವಳಿ ತೀರದ ಹುಡುಗ ಶೈನ್ ಶೆಟ್ಟಿ.

ಕನ್ನಡ ಕಿರುತೆರೆಯ ಜನಪ್ರಿಯ ರಿಯಾಲಿಟಿ ಶೋ ಬಿಗ್ ಬಾಸ್ ಏಳನೇ ಆವೃತ್ತಿಯ ವಿಜೇತರಾಗಿ ಹೊರಹೊಮ್ಮಿದ ಶೈನ್ ಶೆಟ್ಟಿ ಆರ್ಡಿ ದೊಡ್ಡಮನೆ ಶರತ್ಚಂದ್ರ ಶೆಟ್ಟಿ ಮತ್ತು ಕೊಡ್ಲಾಡಿ ದೊಡ್ಡಮನೆ ಇಂದಿರಾ ಎಸ್. ಶೆಟ್ಟಿಯವರ ಹಿರಿಯ ಪುತ್ರ.

ಬಹುಮುಖ ಪ್ರತಿಭೆಯ ಶೈನ್ ಶೆಟ್ಟಿ ತನ್ನ ವಿದ್ಯಾಭ್ಯಾಸದ ತರುವಾಯ ಮುಂಬಯಿಯ ಪ್ರತಿಷ್ಠಿತ ಅಭಿನಯ ಇನ್ಸ್ಟಿಟ್ಯೂಟ್‌ನಲ್ಲಿ ಅಭಿನಯ ತರಬೇತಿ ಪಡೆದು ಸ್ಯಾಂಡಲ್‌ವುಡ್‌ನಲ್ಲಿ ಸಾಧನೆ ಮಾಡುವ ಹಂಬಲದೊಂದಿಗೆ ಹೆಜ್ಜೆಯಿರಿಸಿದರು. ಆ ಮೂಲಕ ಕನ್ನಡದ ಜನಪ್ರಿಯ ಧಾರಾವಾಹಿಗಳಲ್ಲಿ ನಟಿಸಿ, ಕಿರುತೆರೆಯ ನಿರೂಪಕರಾಗಿ ಕಾರ್ಯ ನಿರ್ವಹಿಸಿ, ಬೆಳ್ಳಿಪರದೆಯ ಮೇಲೆ ನಾಯಕ ಮತ್ತು ಸಹ ನಟನಾಗಿ ನಟಿಸಿ ಬದುಕಿನ ಹತ್ತು ಹಲವು ಏರುಪೇರುಗಳ ನಡುವೆ ಸಾಗಿದ ಶೈನ್ ಶೆಟ್ಟಿಯ ಮನೋಸ್ಥೈರ್ಯ ಅಗಾಧವಾದುದು.

ನೂರ ಹದಿಮೂರು ದಿನಗಳ ಕಾಲ ಬಿಗ್ ಬಾಸ್ ಮನೆಯೊಳಗಿನ ಎಲ್ಲಾ ಸವಾಲುಗಳನ್ನು ದಿಟ್ಟತನದಿಂದ ಎದುರಿಸಿ ಅಂತಿಮವಾಗಿ ಗೆಲುವಿನ ಮುಗುಳು ನಗುತ್ತಾ ಹೊರಬಂದು ಕರ್ನಾಟಕದ ಮನೆಮಾತಾದ ಶೈನ್ ಶೆಟ್ಟಿಯವರಿಗೆ ಬೆಂಗಳೂರು ಬಂಟರ ಸಂಘದ ಪರವಾಗಿ ಹೃತ್ಪೂರ್ವಕ ಅಭಿನಂದನೆಗಳು ಹಾಗೂ ಅವರ ಮುಂದಿನ ಭವಿಷ್ಯದ ಹಾದಿ ಇನ್ನಷ್ಟೂ ಸುಗಮವಾಗಲಿ ಅವರ ಪ್ರತಿಭೆ ಮತ್ತಷ್ಟು ಉಜ್ವಲವಾಗಲಿ ಎಂದು ಹಾರೈಸುತ್ತೇವೆ.


Creating life - long bonds
Since 19 Years
HOME FOR ALL
AVAIL THE BENEFITS OF
PMAY
Interest Subsidy Upto ₹2.67 lakh*
PRADHAN MANTRI AWAS YOJANA
RERA Approved
READY TO OCCUPY
2 BHK-30 LAKH
COST INCLUDING
GST & CAR PARKING
SAI MATHA GARDEN
Surathkal, Mangaluru.
1 MATHA Emerald
2 MATHA Opal
3 MATHA Ruby
4 MATHA Diamond
5 MATHA Pearl
6 MATHA Crystal
7 MATHA Sapphire
Near Railway Station and
International Airport Road, Surathkal
MATHA Jyothi Residency
NH-66, Mukka
MATHA Residency
Pakshikere
MATHA Residency
NH-66, Mulky
MATHA Guru Residency
NH-66, Padubidri
MATHA Residency
NH-66, Padubidri
Project Approved in all Nationalized Bank
MATHA Builders & Developers
Developers Pvt. Ltd.
Surathkal: Thara Towers, 2nd Floor, International Airport Road, Surathkal, Mangaluru - 575 014.
Mumbai: Shop No. 8, Bldg. No. 1, New Venkateshwar Nagar, Cabin Road Bhayandar (E), Thane Dist - 401 105.
7259209966
9980711966
mathadevelopers108@gmail.com
www.mathadevelopers.com
CREDAI
7022481666
7259269966 (Mumbai)
Best Investment with Assured Rental Return
ADVT.


ವಾರ್ಷಿಕ ಕ್ರೀಡಾ ಮತ್ತು ಸಾಂಸ್ಕೃತಿಕ ದಿನಾಚರಣೆ






ಕ್ರೀಡಾ ಮತ್ತು ಸಾಂಸ್ಕೃತಿಕ ದಿನಾಚರಣೆ




BUNTS' SANGHA BANGALORE
ಯಕ್ಷ ತೋರಣ-೨

## ಬಂಟರ ಸಂಘ ಬೆಂಗಳೂರು

**ವಿವಾಹ ವೇದಿಕೆ ಸಮಿತಿ – ವಧೂ–ವರರ ಸಮಾವೇಶ**
**"ಅನ್ವೇಷಣೆ"**

**ದಿನಾಂಕ 08.03.2020 ಭಾನುವಾರ, ಸಮಯ : ಬೆಳಿಗ್ಗೆ 10.00ರಿಂದ**
**ಸ್ಥಳ: ಬಂಟರ ಸಂಘ ಆರ್.ಎನ್.ಎಸ್ ವಿದ್ಯಾನಿಕೇತನ**

**ಅಧ್ಯಕ್ಷತೆ: ಆರ್. ಉಪೇಂದ್ರ ಶೆಟ್ಟಿ**
ಅಧ್ಯಕ್ಷರು, ಬಂಟರ ಸಂಘ ಬೆಂಗಳೂರು

**ಮುಖ್ಯ ಅತಿಥಿ:**
**ಶ್ರೀಮತಿ ವಿಜಯಲಕ್ಷ್ಮೀ ಪ್ರಸಾದ್ ರೈ**
ಖ್ಯಾತ ಲೇಖಕಿ

**ಸಂಘದ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮದ ಯಶಸ್ಸಿನಲ್ಲಿ ಪಾಲುದಾರರಾಗಬೇಕಾಗಿ ವಿನಂತಿ**

**ಮಧುಕರ ಎಂ. ಶೆಟ್ಟಿ**
ಗೌರವ ಕಾರ್ಯದರ್ಶಿ

**ಆರ್. ಉಪೇಂದ್ರ ಶೆಟ್ಟಿ**
ಅಧ್ಯಕ್ಷರು

**ಸುಧಾಕರ ಶೆಟ್ಟಿ**
ಸಂಚಾಲಕರು, ವಿವಾಹ ವೇದಿಕೆ ಸಮಿತಿ
ಮೊ: 9845153302

**ಎ. ತಾರಾಮಣಿ ಹೆಗ್ಡೆ**
ಚೇರ್‌ಪರ್ಸನ್, ವಿವಾಹ ವೇದಿಕೆ ಸಮಿತಿ
ಮೊ: 9945381400

**ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ವಿವಾಹ ವೇದಿಕೆ ಸಮಿತಿ ಸದಸ್ಯರು**

**ಬಂಟ ಅರ್ಹ ಆಕಾಂಕ್ಷಿಗಳು ತಮ್ಮ ಇತ್ತೀಚಿನ ಭಾವಚಿತ್ರ, ಸ್ವವಿವರ ಮತ್ತು ಜಾತಕದೊಂದಿಗೆ ಈ ಸಮಾವೇಶದಲ್ಲಿ ಭಾಗವಹಿಸಬೇಕಾಗಿ ಈ ಮೂಲಕ ವಿನಂತಿಸಿಕೊಳ್ಳುತ್ತೇವೆ. ಬೆಳಿಗ್ಗೆ 9–30 ರಿಂದ ಸ್ಥಳದಲ್ಲೇ ನೋಂದಾವಣೆ ನಡೆಯಲಿದೆ.**

## ನೂತನ ವಧೂ–ವರರಿಗೆ ಬೆಂಗಳೂರು ಬಂಟರ ಸಂಘದ ಪರವಾಗಿ ಹಾರ್ದಿಕ ಅಭಿನಂದನೆಗಳು
## ಕರಿಮಣಿ ಯೋಜನೆಯ ಫಲಾನುಭವಿಗಳು



**ಜ್ಞಾನೇಶ್ ರೈ ಮತ್ತು ರಕ್ಷಿತಾ ರೈ**

# Bunts' Sangha R.N.S Vidyaniketan CBSE - Spectrum Report





The Annual Cultural Day is an important event for all schools. The students get a chance to display their talents in front of a big audience. The annual day of Bunts' Sangha RNS Vidyaniketan CBSE Wing "SPECTRUM" was held on 10.01.2020 [Friday] in the Bunts' Sangha RTB Auditorium, decorated with many colourful artefacts made by the craft teachers which looked very beautiful.

The Chief Guest of the day was Mr. Koushik H R, IRS, Customs and Central Excise Department. The Chief Guest was accompanied by the President, Secretary of Bunts' Sangha, Principal of the School, Head Mistress of CBSE Wing to the auditorium. The programme began with an auspicious invocation song 'Ganesha Sthuthi'. The Principal of the School Mrs. Anju Naik welcomed the august gathering, which was followed by the lighting of the lamp. The Head Mistress of CBSE wing presented the annual report accentuating the progress of the school throughout the year. The Secretary of Bunts' Sangha Mr. Madhukar M. Shetty gave the key note address and later the Chief Guest addressed the gathering with some good parenting tips. The students who have excelled in many interschool competitions were rewarded by the Chief Guest.

The Presidential address was given by Mr. R. Upendra Shetty President Bunts' Sangha Bengaluru.

The formal programme was followed by the cultural programme. The talented students showcased their skill in dance performances, skits and music. The theme based programmes like women empowerment and Global Warming struck the right chord with the audience. There were many other mind boggling performances by the students that enthralled the audience for about 2 hours. The audience, comprising of the parents and invitees was captivated by the enchanting performances of the students and soulful symphony of the budding musicians. The grandeur of the Finale left the audience enthralled. The vote of thanks to the revered assembly of Guests was proposed by Mrs. Renu.

# ಬಂಟರ ಸಂಘ ಬೆಂಗಳೂರು

## ಸಮಾಜ ಸೇವಾ ಸಮಿತಿ ಮತ್ತು ಸೇವಾದಳ ವತಿಯಿಂದ

## ಸೇವಾ ಚೇತನ

**ದಿನಾಂಕ: 29.03.2020, ಭಾನುವಾರ**
**ಸಮಯ: ಬೆಳಿಗ್ಗೆ 8.00 ರಿಂದ ರಾತ್ರಿ 8.00 ರವರೆಗೆ**
**ಸ್ಥಳ: ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾಭವನ**

**ಕಾರ್ಯಕ್ರಮಗಳು:**

- ಬೃಹತ್ ರಕ್ತದಾನ ಶಿಬಿರ: ತುರ್ತು ರಕ್ತದ ಅವಶ್ಯಕತೆಗಳಿಗೆ ರಕ್ತ ಸಿಗುವಂತೆ ವಿವಿಧ ಬ್ಲಡ್‌ಬ್ಯಾಂಕ್‌ಗಳ ಸಹಯೋಗದೊಂದಿಗೆ ಬೃಹತ್ ರಕ್ತದಾನ ಶಿಬಿರವನ್ನು ಏರ್ಪಡಿಸಲಾಗಿದೆ.
- ಕಿದ್ವಾಯಿ ಕ್ಯಾನ್ಸರ್ ಸಂಸ್ಥೆಯ ಸಹಯೋಗದೊಂದಿಗೆ ಕ್ಯಾನ್ಸರ್ ಸ್ಕ್ರೀನಿಂಗ್ ಟೆಸ್ಟ್, ಕ್ಯಾನ್ಸರ್ ತಪಾಸಣಾ ಶಿಬಿರ, ನುರಿತ ವೈದ್ಯರಿಂದ ಕ್ಯಾನ್ಸರ್ ಬಗ್ಗೆ ಅರಿವು, ಮುಂಜಾಗ್ರತೆ ಕುರಿತು ಮಾಹಿತಿ ಕಾರ್ಯಗಾರ.
- ಬೆಂಗಳೂರಿನ ವಿವಿಧ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗಳ ಸಹಯೋಗದೊಂದಿಗೆ ಅತ್ಯಾಧುನಿಕ ವೈದ್ಯಕೀಯ ಸಲಕರಣೆಗಳೊಂದಿಗೆ ಬೃಹತ್ ವೈದ್ಯಕೀಯ ತಪಾಸಣಾ ಮತ್ತು ಚಿಕಿತ್ಸಾ ಶಿಬಿರ.
- ಮಧುಮೇಹ, ರಕ್ತದೊತ್ತಡ ಉಂತಾದ ಕಾಯಿಲೆಗಳಿಗೆ ಸುಜೋಕ್ ಮತ್ತು ಅಕ್ಯುಪ್ರೇಶರ್ ಮೂಲಕ ಒಂದು ವಾರಗಳ ಚಿಕಿತ್ಸಾ ಕಾರ್ಯಗಾರ.
- ಕಿವಿ, ಮೂಗು, ಗಂಟಲು ತಜ್ಞರಿಂದ ಮಕ್ಕಳಿಗಾಗಿ ವಿಶೇಷ ತಪಾಸಣಾ ಶಿಬಿರ.
- ಆಧಾರ್ ಮತ್ತು E-Governance, ಸಾಮಾನ್ಯ ಆಡಳಿತ ಸೇವೆ ಸಂಸ್ಥೆಗಳ ಸಹಯೋಗದೊಂದಿಗೆ ಆಧಾರ್ ನೊಂದಣೆ, ತಿದ್ದುಪಡಿ, ಹಿರಿಯ ನಾಗಾರಿಕರ ಚೀಟಿ, ರೇಷನ್ ಕಾರ್ಡ್, ಜಾತಿ ಪ್ರಮಾಣ ಪತ್ರ ಮತ್ತು ಆದಾಯ ಪ್ರಮಾಣ ಪತ್ರ, ವಿವಿಧ ಪರವಾನಿಗೆ ಪಡೆಯಲು ಅನುಕೂಲವಾಗುವಂತೆ ಸೇವಾ ಕೌಂಟರ್. ಇದರ ಜೊತೆಗೆ 68 ಕ್ಕೂ ಹೆಚ್ಚು ಸರ್ಕಾರಿ ಸೌಲಭ್ಯಗಳ ಬಗ್ಗೆ ಪ್ರಮಾಣ ಪತ್ರ ಆ ದಿನವೇ ನೀಡಲಾಗುವುದು.
- ಬ್ಯಾಂಕಿಂಗ್, ಶಿಕ್ಷಣ, ಆರಕ್ಷಣೆ, ಕಾನೂನು, ಆರೋಗ್ಯ ಸೇರಿದಂತೆ ಇನ್ನಿತರ ಹಲವು ವಿಷಯಗಳಲ್ಲಿ ಸಮಾಜ ಬಾಂಧವರಿಗೆ ಅನುಕೂಲಕರವಾದ ಮಾಹಿತಿ ಕಾರ್ಯಗಾರ.
- ಮನೆಯಲ್ಲಿ ಹೂವಿನ ಗಿಡ, ಔಷಧೀಯ ಬಳ್ಳಿಗಳನ್ನು ಬೆಳೆಯಲು ಅನುಕೂಲವಾಗುವ ನಿಟ್ಟಿನಲ್ಲಿ ತಾರಸಿ ತೋಟದ ಕುರಿತು ನೈಜ ಪ್ರಾತ್ಯಕ್ಷಿಕೆ ಮತ್ತು ಮಾಹಿತಿ ಕಾರ್ಯಗಾರ.
- ಬೆಂಗಳೂರಿನಲ್ಲಿ ವಾಸವಾಗಿರುವ ಬಂಟ ಮಕ್ಕಳ ಶಿಕ್ಷಣಕ್ಕೆ ಅನುಕೂಲವಾಗುವಂತೆ ಶೈಕ್ಷಣಿಕ ವರ್ಷಕ್ಕೆ ಅಗತ್ಯವಿರುವ ಸಂಪೂರ್ಣ ನೋಟ್ ಪುಸ್ತಕ ಮತ್ತು ಕಲಿಕಾ ಸಾಮಾಗ್ರಿ ವಿತರಣೆ.
- ಸಾಮಾಜಿಕ ಕಳಕಳಿಯ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು.

**ತಮಗೆಲ್ಲರಿಗೂ ಆದರದ ಸ್ವಾಗತ ಬಯಸುವ**

**ಮಧುಕರ ಎಂ. ಶೆಟ್ಟಿ**
ಗೌರವ ಕಾರ್ಯದರ್ಶಿ

**ಆರ್. ಉಪೇಂದ್ರ ಶೆಟ್ಟಿ**
ಅಧ್ಯಕ್ಷರು

**ಅಜಿತ್ ಶೆಟ್ಟಿ ಉಳ್ತೂರು**
ಸಂಚಾಲಕರು, ಸಮಾಜ ಸೇವಾ ವಿಭಾಗ

**ಉಮೇಶ್ ಶೆಟ್ಟಿ ಎಂ. ಬಿ**
ಚೇರ್‌ಪರ್ಸನ್, ಸಮಾಜ ಸೇವಾ ವಿಭಾಗ

**ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು, ಸಮಾಜ ಸೇವಾ ಸಮಿತಿ ಹಾಗೂ ಸೇವಾದಳದ ಸದಸ್ಯರು**

# ಬಂಟರ ಸಂಘ ಬೆಂಗಳೂರು

## ಮಹಿಳಾ ವಿಭಾಗ – ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ

# ‘ದೀಪ್ತಿ’

**ದಿನಾಂಕ: 14.03.2020 ಶನಿವಾರ – ಸಮಯ: ಪೂರ್ವಾಹ್ನ 10.00ರಿಂದ**

**ಸ್ಥಳ: ರಾಧಾಬಾಯಿ ತಿಮ್ಮಪ್ಪ ಭಂಡಾರಿ ಸಭಾಂಗಣ**

